# ನಲಿ ಕಲಿ ಕ್ರಿಯಾಶೀಲ ತಾರೆಯರು

## ಶಿವಮೊಗ್ಗ ಜಿಲ್ಲೆ



# ಸೇತುಬಂಧ ಶಿಕ್ಷಣ

## 2021-22

## 5ನೇತರಗತಿ ಮಕ್ಕಳ ಕಲಿಕೆಗಾಗಿ

(ಹಿಂದಿನ ತರಗತಿಯ ಕಲಿಕಾಫಲಗಳನ್ನು ಆಧರಿಸಿದಂತೆ)

# ಕನ್ನಡ

# ಅಭ್ಯಾಸದ ಹಾಳೆಗಳು

## ಮಾರ್ಗದರ್ಶನ

ಶ್ರೀಯುತ ಫಣೀಶ್
ಹಿರಿಯ ಉಪನ್ಯಾಸಕರು
ಡಯಟ್ ಶಿವಮೊಗ್ಗ

**ಸಹಕಾರ : ಶ್ರೀಮತಿ ಲೀಲಾವತಿ, ಉಪನ್ಯಾಸಕರು, ಡಯಟ್ ಶಿವಮೊಗ್ಗ.**

## ಸಂಪನ್ಮೂಲ ವ್ಯಕ್ತಿಗಳು

*******

**ನಿರ್ವಾಹಕರು : ಶ್ರೀ ರೇಣುಕಾರಾಧ್ಯ ಮತ್ತು ಶ್ರೀಮತಿ ಫೌಜಿಯ ಸರವತ್.**

ಶ್ರೀಮತಿ ಯಶೋಧ.ವಿ.
ಸ.ಹಿ.ಪ್ರಾ.ಶಾಲೆ ವಾಟಗಾರು
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಶ್ರೀಮತಿ ರೂಪ ಡಿ.ಜೆ.
ಸ.ಕಿ.ಪ್ರಾ. ಶಾಲೆ ಅರಸನಘಟ್ಟ ತಾಂಡಾ
ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಶ್ರೀಮತಿ ಅರುಣ.ಜಿ.ಎಸ್.
ಸ.ಕಿ.ಪ್ರಾ. ಶಾಲೆ ಅಗಸನಹಳ್ಳಿ
ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಶ್ರೀಮತಿ ರೇಖಾ ಪಿ ಕುಲಾಲ್
ಸ.ಹಿ.ಪ್ರಾ. ಶಾಲೆ ನೂಲಿಗ್ಗೇರಿ
ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಶ್ರೀಮತಿ ಶ್ರೀದೇವಿ.ಡಿ.ಜೆ.
ಸ.ಹಿ.ಪ್ರಾ.ಶಾಲೆ ಅರಸನಘಟ್ಟ ತಾಂಡ
ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಶ್ರೀಮತಿ ಭಾಗೀರಥಿ
ಸ.ಕಿ.ಪ್ರಾ.ಶಾಲೆ ಗುತ್ಯಪ್ಪಕಾಲೋನಿ
ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ತಾಂತ್ರಿಕ ಸಹಕಾರ
ಶ್ರೀಯುತ ಶಿವಶಂಕರಯ್ಯ..ಹೆಚ್.ಎಲ್
ಸ.ಕಿ.ಪ್ರಾ.ಶಾಲೆ ಬಿ.ಸಿ ಪಾಳ್ಯ
ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.

## ಕೊಡುಗೆ
## "ನಲಿಕಲಿ ಕ್ರಿಯಾಶೀಲ ತಾರೆಯರು"

Edit with WPS Office

ಕಳ್ಳಪೊಲೀಸ್ ಆಟ

**ಕ್ಷೇತ್ರ** : ಆಲಿಸುವುದು. ದಿನ 1-2

**ಕಲಿಕಾಂಶ** : ಮೌಖಿಕ ಸೂಚನೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ.

**ಸೂಚನೆ** : ಪ್ರೀತಿಯ ಪೋಷಕರೇ, ಕೆಳಗೆ ನೀಡಿರುವ ನಿಮಗೆ ಈಗಾಗಲೇ ತಿಳಿದಿರುವ ನೀವೆಲ್ಲರೂ ಆಡಿರುವ ಕಳ್ಳ ಪೊಲೀಸ್ ಆಟವನ್ನು ತಮ್ಮ ಮಕ್ಕಳಿಗೂ ಪರಿಚಯಿಸೋಣವೇ? ಮಾದಲಿಗೆ ನಿಯಮಗಳನ್ನು ಮಗುವಿಗೆ ತಿಳಿಸಿ.(ಕ್ಯೂ ಆರ್ ಕೋಡ್ ಬಳಸಿ ವಿಡಿಯೋ ತೋರಿಸಿ)

**ಚಟುವಟಿಕೆ** -1 ಕಳ್ಳ ಪೊಲೀಸ್ ಆಟ

**ನಿಯಮಗಳು** :- 1. ತಂಡದಲ್ಲಿ 4 ಮಕ್ಕಳಿರಬೇಕು.

2. 4 ಚೀಟಿಗಳನ್ನು ಮಾಡಿ ಅದರಲ್ಲಿ ರಾಜ, ರಾಣಿ,ಕಳ್ಳ ,ಪೊಲೀಸ್ ಎಂದು ಬರೆಯಬೇಕು.

3.ಚೀಟಿಗಳನ್ನು ಮಡಚಿ ಕಲಕಿ ಹಾಕಬೇಕು.ಒಬ್ಬೊಬ್ಬರು ಒಂದೊಂದು ಚೀಟಿ ಆರಿಸಿಕೊಂಡು ನೋಡಬೇಕು.ಪೊಲೀಸ್ ಚೀಟಿ ಬಂದ ಮಗು ಕಳ್ಳ ಯಾರು ಎಂದು ಕಂಡುಹಿಡಿಯಬೇಕು.

4.ಪೊಲೀಸ್ ಮತ್ತು ಕಳ್ಳ ಚೀಟಿ ಬಂದ ಮಗುವನ್ನು ಕಂಡು ಹಿಡಿಯಲು ವಿಫಲವಾದರೆ ಒಂದು ಹಾಡನ್ನು ಹಾಡಬೇಕು ಗುಂಪಿನಲ್ಲಿ ಎಲ್ಲರೂ ನಂತರ ಹೇಳಬೇಕು.

5. ಒಂದು ವೇಳೆ ಕಳ್ಳನನ್ನು ಕಂಡುಹಿಡಿದರೆ ಕಳ್ಳ ಚೀಟಿ ಬಂದ ಮಗು ಹಾಡನ್ನು ಹೇಳಬೇಕು ಹೀಗೆ ಮುಂದುವರಿಸುತ್ತಾ ಹೋಗಬೇಕು

**ಚಟುವಟಿಕೆ** :- 2 ಕುಂಟೆಬಿಲ್ಲೆ

**ನಿಯಮಗಳು** :1. ಈ ಆಟ ಒಂದು ಹಾಗೂ ಒಂದಕ್ಕಿಂತ ಹೆಚ್ಚು ಮಕ್ಕಳು ಆಡಬಹುದು.

2. ಒಂದು ದೊಡ್ಡ ಆಯತ ದೊಳಗೆ ಒಂದು ಲಂಬ ರೇಖೆ ಹಾಗೂ ಮೂರು ಅಡ್ಡ ರೇಖೆಗಳು ಇರುತ್ತವೆ .ಕೊನೆಯೆರಡು ಅಯತಗಳಲ್ಲಿ ಗುಣಿಸು ಚನ್ಹೆ ಇರುತ್ತದೆ.

3. ಒಬ್ಬ ಆಟಗಾರ ಆಟವನ್ನು ಪ್ರಾರಂಭಿಸುತ್ತಾನೆ ಗುಣಿಸು ಚಿನ್ನ ಇರುವ ಬದಿಯು ಕೊನೆಯಾಗಿದ್ದು ಆಟವನ್ನು ಇನ್ನೊಂದು ಬದಿಯಿಂದ ಪ್ರಾರಂಭಿಸುತ್ತಾರೆ.

4. ಬಿಲ್ಲೆಯನ್ನು ಬಲಗಡೆಯ ಆಯತದಲ್ಲಿ ಹಾಕಿ ಎಡಗಡೆಯ ಆಯತ ದಿಂದ ಒಂಟಿಕಾಲಿನಲ್ಲಿ ಕುಂಟುತ್ತಾ ಮುಂದಿನ ಆಯತ ಗಳಿಗೆ ಹಾರುತ ಹೋಗಬೇಕು.

5. ಕೊನೆಯೆರಡು ಆಯತ ಗಳಲ್ಲಿ ಎರಡು ಕಾಲುಗಳನ್ನು ಊರಬಹುದು ಬಿಲ್ಲೆಯನ್ನು ಕಾಲಿಂದ ನೂಕಿ ಹೊರಹಾಕಬೇಕು ಅಲ್ಲಿಂದ ಹೊರಗಡೆ ಬಿದ್ದಿರುವ ಬಿಲ್ಲೆ ಮೇಲೆ ಹಾರಬೇಕು.

6. ಹೇಗೆ ಬಿಲ್ಲೆಯನ್ನು ಒಂದರನಂತರ ಒಂದರಂತೆ ಎಲ್ಲಾ ಆಯತ ಗಳಲ್ಲಿ ಹಾಕಿ ಆಟ ಮುಂದುವರಿಸಬೇಕು.

7. ಬಿಲ್ಲೆಯು ಬೀಳಬೇಕಾದ ಆಯತದಲ್ಲಿ ಇಲ್ಲದಿದ್ದಲ್ಲಿ ಅಂಕಣದ ಗೆರೆಗಳ ಮೇಲೆ ಬಿದ್ದಲ್ಲಿ ಹೊರಗಡೆ ಬಿದ್ದ ಬಿಲ್ಲೆಯ ಮೇಲೆ ಆಟಗಾರ ಮೆಟ್ಟ ದಿದ್ದಲ್ಲಿ ಗೆರೆಗಳ ಮೇಲೆ ಬಿಲ್ಲೆ ಬಿದ್ದಲ್ಲಿ ಮಗು ಔಟ್ ಆಗ ಮುಂದಿನ ಸರದಿ ಮತ್ತೊಂದು ಮಗುವಿನದು.

8. ಸೋತ ಅಥವಾ ಔಟಾದ ಮಗು ತನಗೆ ತಿಳಿದಿರುವ ಆಟವನ್ನು ಅದರ ನಿಯಮಗಳನ್ನು ಹೇಳಬೇಕು.

ಗ್ರಾಮೀಣ ಆಟಗಳನ್ನು ಕಲಿಯೋಣ ಉಳಿಸಿ ಬೆಳೆಸೋಣ. ರೇಖಾ ಪಿ ಕುಲಾಲ್ ಹೊಸನಗರ

Edit with WPS Office

ಕ್ಷೇತ್ರ : ಆಲಿಸುವಿಕೆ. ದಿನ - 3

ಸಾಮರ್ಥ್ಯ : ನಿಯಮಗಳನ್ನು ಅರಿತು ವೈಯಕ್ತಿಕವಾಗಿ /ಗುಂಪಿನಲ್ಲಿ ಆಡುತ್ತಾರೆ.

ಚಟುವಟಿಕೆ : 1 ನಿನಗೆ ತಿಳಿಸಿರುವ ಚೌಕಾಬಾರ ಆಟದ ಮಾದರಿಯ ಚಿತ್ರವನ್ನು ಹಾಳೆಯಲಿ ಬರೆದು ಆ ಆಟದ ನಿಯಮಗಳನ್ನು ನಿಮ್ಮ ಮನೆಯಲ್ಲಿ ಹೇಳು

2.ನಿನ್ನ ಮನೆಯಲ್ಲಿ ಯಾವುದಾದರೂ ಒಂದು ಆಟದ ಬಗ್ಗೆ ತಿಳಿದು ಆ ಆಟ ಆಡುವ ಬಗ್ಗೆ ಕೇಳಿ ತಿಳಿದುಕೊ.

3. ನೀನು ಮನೆಯಲ್ಲಿ ತಿಳಿದುಕೊಂಡು ಬಂದ ಆಟವನ್ನು ಸ್ನೇಹಿತರೊಂದಿಗೆ ಅಥವಾ ನಿನ್ನ ಅಣ್ಣ ಅಕ್ಕರೊಂದಿಗೆ ಆಟ ಆಡು ಮತ್ತು ನೀವುಗಳು ಎಲ್ಲರೂ ಸೇರಿ ಒಂದು ಹೊಸ ಆಟ ಹುಡುಕಿ ಆ ಆಟದ ಚಿತ್ರ ಬರೆದು ನಿಯಮವನ್ನು ಬರೆ.

ರೇಣುಕಾರಾಧ್ಯ ಪಿ ಪಿ ತೀರ್ಥಹಳ್ಳಿ

Edit with WPS Office

5ನೇ ತರಗತಿ. ದಿನ 4 ಮತ್ತು 5

ಅಪೇಕ್ಷಿತ ಕಲಿವಿನ ಫಲ :ಕಥನ ವಿವರಣೆಯನ್ನು ಆಲಿಸುವುದರ ಜೊತೆಗೆ ಅರ್ಥಮಾಡುಕೊಳ್ಳುವರು.

ಕ್ಷೇತ್ರ : ಆಲಿಸುವುದು

ಕಲಿಕಾಂಶ : ಕಥೆಗಳನ್ನು ಆಲಿಸುವುರು ಏನು ?ಏಕೆ?ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ.

ಸೂಚನೆ : ಕಥೆಯನ್ನು ಗಟ್ಟಿಯಾಗಿ ಓದು ಮತ್ತು qr ಕೋಡ್ ಸ್ಕ್ಯಾನ್ ಮಾಡಿ ವಿಡಿಯೋ ನೋಡು.

ಒಂದು ಅಡವಿಯಲ್ಲಿ ಒಂದು ನದಿ ಹರಿಯುತ್ತಿತ್ತು, ಆ ನದಿಯ ದಡದಲ್ಲಿ ಒಂದು ಮರವಿತ್ತು. ಆ ಮರದ ಮೇಲೆ ಒಂದು ಪಾರಿವಾಳ ಕುಳಿತಿತ್ತು. ಆ ಪಾರಿವಾಳವು ನದಿಯಲ್ಲಿ ತೇಲುತ್ತಾ, ಮುಳುಗುತ್ತಿ ಇದ್ದ ಇರುವೆಯನ್ನು ನೋಡಿತು, ಆ ಇರುವೆಯನ್ನು ನೋಡಿತು .ಆ ಇರುವೆಯನ್ನು ಬದುಕಿಸಲೆಂದುದ ಪಾರಿವಾಲವು ಒಂದು ಎಲೆಯನ್ನು ನದಿಗೆ ಎಸೆಯಿತು. ಇರುವೆಯು ದಡ ಸೇರಿತು. ಇರುವೆಯು ಪಾರಿವಾಳದ ಉಪಕರವನ್ನು ಸ್ಮರಿಸಿತು.

ಒಮ್ಮೆ ಒಬ್ಬ ಬೇಟೆಗಾರನು ಪಾರಿವಾಲವನ್ನು ಕೊಲ್ಲಲು ಬಾಣದಿಂದ ಗುರಿ ಇಟ್ಟನು. ಇದನ್ನು ನೋಡಿದ ಇರುವೆ ಬೇಟೆಗಾರನ ಕಾಲನ್ನು ಕಚ್ಚಿತು. ಬೇಟೆಗಾರನು ಇಟ್ಟ ಬಾಣದ ಗುರಿ ತಪ್ಪಿತು, ಪಾರಿವಾಳವು ಬದುಕಿತು.ಈ ರೀತಿ ಇರುವೆಯು ಪಾರಿವಾಳಕ್ಕೆ ಪ್ರತ್ಯುಪಕಾರ ಮಾಡಿತು.

ಕಥೆಯನ್ನು ಆಲಿಸಿದ ನೀನು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಮರದ ಮೇಲೆ ಯಾವ ಪಕ್ಷಿ ಕುಳಿತಿತ್ತು?

2.ಇರುವೆಗೆ ಪಾರಿವಾಳ ಹೇಗೆ ಸಹಾಯ ಮಾಡಿತು?

3.ಈ ಕಥೆಯಿಂದ ನೀನು ಏನು ತಿಳಿದುಕೊಂಡೆ?

ರೇಖಾ.ಪಿ.ಕುಲಾಲ್ ಸಹಶಿಕ್ಷಕಿ
ಸ.ಹಿ.ಪ್ರಾ.ಶಾಲೆ ನೂಲಿಗ್ಗೇರಿ
ಹೊಸನಗರ ತಾಲೂಕ ಶಿವಮೊಗ್ಗ ಜಿಲ್ಲೆ

Edit with WPS Office

ಕ್ಷೇತ್ರ : ಆಲಿಸುವುದು. ದಿನ - 6 5ನೇ ತರಗತಿ

**ಸಾಮರ್ಥ್ಯ** : ಒಗಟುಗಳನ್ನು ರಚಿಸುತ್ತಾರೆ ಮತ್ತು ಸ್ವತಃ ರಚಿಸುತ್ತಾರೆ.

**1. ನಿನಗೆ ಇಷ್ಟವಾದ ಸಿಹಿ ಅಥವಾ ಖಾರದ ತಿಂಡಿಯ ಹೆಸರು ಬರೆ ಮತ್ತು ಆ ತಿಂಡಿಯನ್ನು ಹೇಗೆ ತಯಾರಿಸಿದರು ಎಂದು ನಿನ್ನ ಮನೆಯಲ್ಲಿ ಕೇಳಿ ಬರೆ.**

**2.ನಿಮ್ಮ ಮನೆಯಲ್ಲಿ ಕೇಳಿ ವಿವಿಧ ಒಗಟುಗಳು ಸಂಗ್ರಹಿಸಿ ಇಲ್ಲಿ ಬರೆ ಮತ್ತು ಸ್ನೇಹಿತರಿಗೆ ಕೇಳು.**

**2.ಇಲ್ಲಿರುವ ಒಗಟುಗಳನ್ನು ಮಕ್ಕಳಿಗೆ ಕೇಳಿಸಿ ಉತ್ತರ ಪಡೆಯಿರಿ.(ಹೆಚ್ಚು ಅಂಕ ಪಡೆದವರಿಗೆ ಸತ್ಯದ ಸರದಾರ ಬಿರುದು ನೀಡುವುದು)**

೧. ಗೂಡಿನಲ್ಲಿನ ಪಕ್ಷಿ ನಾಡೆಲ್ಲ ನೋಡುತ್ತದೆ- ಕಣ್ಣು

೨, ಕಾಸಿನ ಕುದುರೆಗೆ ಬಾಲದ ಲಗಾಮು-ಸೂಜಿ ದಾರ

೩, ಎಲೆ ಇಲ್ಲ ಸುಣ್ಣ ಇಲ್ಲ, ಬಣ್ಣವಿಲ್ಲ ತುಟಿ ಕೆಂಪಗಾಗಿದೆ, ಮಳೆಯಿಲ್ಲ, ಬೆಳೆಯಿಲ್ಲ, ಮೈ ಹಸಿರಾಗಿದೆ- ಗಿಳಿ

೪. ಮನೆ, ಮನೆಗೆರಡು ಬಾಗಿಲು, ಬಾಗಿಲ ಮುಂದೆ, ಮುಚ್ಚಿದರೆ ಹಾನಿ ಇದೇನು?- ಮೂಗು, ಬಾಯಿ

೫. ಸುತ್ತ ಮುತ್ತ ಸುಣ್ಣದ ಗೋಡೆ, ಎತ್ತ ನೋಡಿದರೂ ಬಾಗಿಲಿಲ್ಲ ಇದು ಏನು?- ಮೊಟ್ಟೆ

೬. ಅಂಗಳದಲ್ಲಿ ಹುಟ್ಟುವುದು, ಅಂಗಳದಲ್ಲಿ ಬೆಳೆಯುವುದು, ತನ್ನ ಮಕ್ಕಳ ಹಂಗಿಸಿ ಮಾತಾಡುವುದು ಇದು ಏನು?- ಕೋಳಿ

೭. ಇದ್ದಲು ನುಂಗುತ್ತ, ಗದ್ದಲ ಮಾಡುತ್ತಾ ಉದ್ದಕ್ಕೂ ಓಡುತ್ತಾ ಮುಂದಕ್ಕೆ ಸಾಗುವ ನಾನ್ಯಾರು?- ರೈಲು

ರೇಣುಕಾರಾಧ್ಯ ಸ.ಕಿ.ಪ್ರಾ.ಶಾಲೆ ಸಂಕ್ಲಾಪುರ ತೀರ್ಥಹಳ್ಳಿ

Edit with WPS Office

Class :5 **ಅಭ್ಯಾಸ ಹಾಳೆ** ದಿನ :7

ದಿನ :8

ಕ್ಷೇತ್ರ ಮಾತನಾಡು

ಅಪೇಕ್ಷಿತ ಕಲಿಕಾ ಫಲ :ಪರಿಚಿತ /ಅಪರಿಚಿತ /ವಸ್ತು /ಘಟನೆಗಳ ಬಗ್ಗೆ ವಿವರಿಸುವರು

ಕಲಿಕಾಂಶ /ಸಾಮರ್ಥ್ಯ :ಅಪರಿಚಿತ ಘಟನೆಗಳು ಎದುರಾದಾಗ ಅದನ್ನು ಎದುರಿಸಬಲ್ಲವರಾಗಿರುತ್ತಾರೆ

ಪರಿಚಿತ ಸನ್ನಿವೇಶದಲ್ಲಿ ಮಾತನಾಡುವುದು

**ಚಟುವಟಿಕೆಗಳು ;**ವರ್ಣ ವಿಸ್ತಾರ, ನೀನ್ಯಾರು, ಸಮಸ್ಯೆಗೊಂದು ದಾರಿ

ಚಿತ್ರ ನೋಡಿ ಸಲಹೆನೀಡು, ಸ್ವಯಂಭು

**ಪೋಷಕರಿಗೆ /ಮಕ್ಕಳಿಗೆ ಸೂಚನೆ :**ಸುಗಮಕಾರರು ನೀಡಿದ ಸೂಚನೆ ಗನುಗುಣವಾಗಿ ಮಾತನಾಡುವುದು ಅಕ್ಷರ ನೋಡಿ ಪದ ರಚಿಸಲು ಹೇಳುವುದು ರಚಿಸಿದ ಪದಗಳಿಂದ ವಾಕ್ಯದಲ್ಲಿ ಮಾತನಾಡುವುದು ಕಲ್ಪಿತ ಸಮಸ್ಯೆ ಕೊಟ್ಟು ಮಾತನಾಡಿಡುವುದು

| | | | | |
|---|---|---|---|---|
| ಕ | ಖ | ಗ | ಘ | ಙ |
| ಚ | ಛ | ಜ | ಝ | ಞ |
| ಟ | ಠ | ಡ | ಢ | ಣ |
| ತ | ಥ | ದ | ಧ | ನ |
| ಪ | | | | |

Edit with WPS Office

## ಚಿತ್ರ ಹೆಸರಿಸಿ ಮತ್ತು ಅವುಗಳ ಬಗ್ಗೆ ಮಾತನಾಡಿ





## ಕಲ್ಪಿತ ಸಮಸ್ಯೆ ಗಳಿಗೆ ಪರಿಹಾರ ಕಂಡುಕೊಳ್ಳುವುದು .




ಧೂಮಪಾನ

ವಿದ್ಯುತ್ ಅವಘಡ

Edit with WPS Office



ಇದು ಯಾವ ದೃಶ್ಯ ವ್ಯವಸಾಯ ಕ್ಕೆ ಬೀಜದ ಕೊರತೆಯಾದಾಗ ಸಮಸ್ಯೆ ಹೇಗೆ ಪರಿಹರಿಸಿಕೊಳ್ಳುವಿರಿ

ತರಗತಿ :5 ಅಭ್ಯಾಸ ಹಾಳೆ ದಿನ :9

ಕಲಿಕಾ ಫಲ :ಪರಿಚಿತ /ಅಪರಿಚಿತ ವಸ್ತು ಘಟನೆಗಳ ಬಗ್ಗೆ ವಿವರಿಸುವರು

ಕಲಿಕಾಂಶ :ಘಟನಾವಳಿಗಳನ್ನು ಅರಿತು ವಿವರಿಸುತ್ತಾರೆ

## ಚಟುವಟಿಕೆ :ನಮ್ಮ ಸಮಾರಂಭ ನೀನವನಾದರೆ ಪರಿಸರ ಅಳಿವು ಉಳಿವು ಮಾನವನಿಂದ

।






## ಈ ಮೇಲೆ ನೀಡಿದ ಸಮಾರಂಭ ದ ಬಗ್ಗೆ ನೀವು ಹೇಗೆ ತಯಾರಿ ನಡೆಸುವಿರಿ ಮಾತನಾಡಿ

**1 ನೀನು ರಾಜ್ಯ ಅಥವಾ ದೇಶವನ್ನಾಳುವ /ಗ್ರಾಮ ಪಂಚಾಯಿತಿ ಅಧ್ಯಕ್ಷಾದರೆ ಏನು ಮಾಡುವೆ ಮಾತಿನಲ್ಲಿ ವ್ಯಕ್ತ ಪಡಿಸು**







## ಪರಿಸರ ಉಳಿವು ಮಾನವನಿಂದ ಹೇಗೆ ಸಾಧ್ಯ?

YASHODHA V

Ghps vaatagaaruthirthahalli

# ಅಭ್ಯಾಸ ಹಾಳೆ

ತರಗತಿ:4 ವಿಷಯ:ಕನ್ನಡ

**ಕಲಿವಿನ ಫಲ:-ಪರಿಚಿತ ಮತ್ತು ಅಪರಿಚಿತ ವಿಷಯಗಳ ಬಗ್ಗೆ ಮಾತನಾಡುವಿರಿ.**

**ಸಾಮರ್ಥ್ಯ:ಉಕ್ತಲೇಖನದ ಮೂಲಕ ಅಪರಿಚಿತ ಪದಗಳನ್ನು ಬರೆಯುವುದು.**

**1.ಈ ಕೆಳಗಿನ ಚಿತ್ರ ನೋಡಿ ವಾಕ್ಯ ಪೂರ್ಣ ಮಾಡಿ.**

1. 

ಮಕ್ಕಳ ರಜಾ ಸಮಯ ಕಳೆಯಲು

______________________________________

______________________________________________________________

__________________

2  **ಹೊಲದಲ್ಲಿ**_____________________________________________

_____________________________________________

___________________________

2 .ಈ ಕೆಳಗಿನ ಪದಗಳ ನಾನಾರ್ಥ ಬರೆದು ಸ್ವಂತ ಮಾಡಿ.

ಮಾದರಿ:ಹಿಡಿ=ಹಿಡಿದುಕೊಳ್ಳು, (ಪುಟ್ಟಿ ಪಾಟಿ ಹಿಡಿದಿಹಳು)

ಹಿಡಿ=ಮುಷ್ಟಿಯಷ್ಟು(ಒಂದು ಹಿಡಿಯಷ್ಟು ಗೊಬ್ಬರ ಗಿಡಕ್ಕೆ ಹಾಕು)

1. ಬಿತ್ತು =_____________________________________________..

_____________________________________________.

2.ಹೊಳೆ=______________________________________________

______________________________________________

3 .ಕಾಡು=________________________________________.

______________________________________________

4 .ಬರೆ=________________________________________

____________________________________.

**3.ಈ ಕೆಳಗಿನ  ಗಾದೆ ಮಾತುಗಳನ್ನು ಪೂರ್ಣಗೊಳಿಸಿ.**

**ಅಡಿಕೆಗೆ ಹೋದ ಮಾನ ___________________________________**

**ದೇಶ ಸುತ್ತು,___________________________.**

**ಮೂರು ವರ್ಷದ ಬುದ್ಧಿ_____________________________________..**

**ಹೆಣ್ಣು ಸಂಸಾರದ ___________________________..**

4.ನಿನ್ನ ಪೋಷಕರ ಸಹಾಯ ಪಡೆದು ಇನ್ನಷ್ಟು ಗಾದೆಮಾತುಗಳನ್ನು ಬರೆ

______________________________________________________________

_______________________________________________________..

______________________________________________________.

5.ನಿನ್ನ  ಗೆಳೆಯ/ಗೆಳತಿ ಹೇಳಿದ 5 ಪದಗಳನ್ನು ಉಕ್ತಲೇಖನ ಬರೆ.

_________________________________________________________.

___________________________________________________________.

______________________________________________________..

____________________________________________________________.

_____________________________________________________________.

Edit with WPS Office

ತರಗತಿ :5 ಅಭ್ಯಾಸದ ಹಾಳೆ ದಿನ 10/1

ಕಲಿಕಾ ಫಲ :ಪಠ್ಯ ಮತ್ತು ಆಡುಭಾಷೆಗಳ ನಡುವಿನ ವ್ಯತ್ಯಾಸವನ್ನು ಗುರುತಿಸಿ ಮಾತನಾಡುವರು

ಕಲಿಕಾಂಶ /ಸಾಮರ್ಥ್ಯ ;ಆಡುಭಾಷೆಯ ಪದಗಳ ರಚನೆಯನ್ನು ಗುರುತಿಸುತ್ತಾರೆ

ಚಟುವಟಿಕೆ :ತೋಟದ ಮನೆ ಸಂಭಾಷಣೆ

ಹೀಗೆ ಮಕ್ಕಳಿಗೆ ಚಟುವಟಿಕೆ ಕೊಟ್ಟು ಅದನ್ನು ಕುರಿತು ಮಾತನಾಡಲು ತಿಳಿಸುವುದು



ಮರುಭೂ
ಮಿ ಜೀವನ



ಆರೋಗ್ಯ
ಕೇಂದ್ರ ಸ್ವಚ್ಛತೆ

ಆಡುಭಾಷೆಯಲ್ಲಿ ಮಾತನಾಡಲು ಅವಕಾಶ ಕಲ್ಪಿಸುವುದು ಪದ ರಚಿಸುವುದು

ಕಲಿಕಾಂಶ /ಸಾಮರ್ಥ್ಯ :ಆಡು ಭಾಷೆಯ ಪದಗಳನ್ನು ಗುರುತಿಸುತ್ತಾರೆ ದಿನ -10/2

ಚಟುವಟಿಕೆ :ರೋಗಿ... ಡಾಕ್ಟರ್, ಪ್ರಯಾಣಿಕ... ಗ್ರಾಹಕ, ಅಮ್ಮ... ನಾನು, ನಾನು ನನ್ನ ಬೆಕ್ಕು

Edit with WPS Office








**ಈ ಮೇಲಿನ ಸನ್ನಿವೇಶ ದ ಬಗ್ಗೆ ಮಾತನಾಡಿ ಪದ ಬರೆಯಿರಿ**

**ಪೋಷಕರಿಗೆ ಸೂಚನೆ ನೈಜ ಜೀವನದಲ್ಲಿ ಎದುರಾಗುವ ಈ ರೀತಿ ಸನ್ನಿವೇಶ ಪರಿಚಯಿಸಿ**

**ತರಗತಿ :5** **ದಿನ 11**

**ಕಲಿಕಾಂಶ :ಪಠ್ಯ ಭಾಷೆಯ ಪದಗಳ ರಚನೆಯನ್ನು ಗುರುತಿಸುತ್ತಾರೆ 11/1,11/211/3**

**ಚಟುವಟಿಕೆ ನಾಟಕಾಭಿನಯ ಪದಪ್ರಯೋಗ ಪದವಿನೋದ ಇದನ್ನು ಓದಿಕೊಂಡು ನಟನೆ ಮಾಡಿ**



**ರೈಲು ನಿಲ್ದಾಣ**

ಜಿಯುಗಾವ್ಕೋಕ ನಿಲ್ದಾಣದಲ್ಲಿ, ಓಯಿಮಾಚಿ ರೈಲಿನಿಂದ ಇಳಿದು ತೊತ್ತೊ-ಚಾನ್‌ಳ ತಾಯಿ ಮಗಳ ಕೈಹಿಡಿದು, ಟಿಕೇಟ್ ತೋರಿಸಿ ಹೊರಬರುವ ಗೇಟಿನ ಕಡೆ ನಡೆದಳು. ತೊತ್ತೊ-ಚಾನ್ ಈ ಮೊದಲು ರೈಲಿನಲ್ಲಿ ಪ್ರಯಾಣಿಸಿದ್ದಿಲ್ಲವೆಂದೇ ಹೇಳಬೇಕು. ತನ್ನ ಮುಷ್ಟಿಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡಿದ್ದ ಅಮೂಲ್ಯವಾದ ಟಿಕೇಟುಗಳನ್ನು ಕೊಟ್ಟುಬಿಡಲು ಅವಳು ತಯಾರಿರಲಿಲ್ಲ.

"ನಾನಿದನ್ನ ಇಟ್ಟುಕೊಳ್ಳಲಾ?" ತೊತ್ತೊ-ಚಾನ್ ಟಿಕೇಟು ಕಲೆಕ್ಟರನನ್ನು ಕೇಳಿದಳು. "ಇಲ್ಲ ನೀನು ಹಾಗೆ ಮಾಡಲು ಸಾಧ್ಯವಿಲ್ಲ" ಎನ್ನುತ್ತಲೇ ಆತ ಅವಳಿಂದ ಟಿಕೇಟನ್ನು ಪಡೆದ.

"ಅವೆಲ್ಲಾ ನಿಮ್ಮದೇನಾ?" ಟಿಕೇಟುಗಳಿಂದ ತುಂಬಿದ ಅವನ ಪೆಟ್ಟಿಗೆಯತ್ತ ತೋರಿಸುತ್ತಾ ಆಕೆ ಕೇಳಿದಳು.

"ಇಲ್ಲ, ಅವೆಲ್ಲಾ ರೈಲು ನಿಲ್ದಾಣಕ್ಕೆ ಸೇರಿದವು" ಹೊರಹೋಗುವ ಜನರಿಂದ ಟಿಕೇಟು ಕಸಿದುಕೊಳ್ಳುತ್ತಾ ಅವನೆಂದ.

"ಓಹೋ" ತೊತ್ತೊ-ಚಾನ್ ಪೆಟ್ಟಿಗೆಯತ್ತಲೇ ನೋಡುತ್ತಾ "ನಾನು ದೊಡ್ಡವಳಾದ ಮೇಲೆ ರೈಲು ಟಿಕೇಟುಗಳನ್ನು ಮಾರುತ್ತೇನೆ" ಎಂದಳು.

ಇದೀಗ ಟಿಕೇಟು ಕಲೆಕ್ಟರ್ ಅವಳತ್ತ ನೋಡಿದ. "ನನ್ನ ಸಣ್ಣ ಮಗನೂ ರೈಲ್ವೇ ನಿಲ್ದಾಣದಲ್ಲೇ ಕೆಲಸ ಮಾಡುತ್ತಾನಂತೆ. ನೀವಿಬ್ಬರೂ ಕೂಡಿಯೇ ಕೆಲಸ ಮಾಡಬಹುದು!" ಎಂದ.

ತೊತ್ತೊ-ಚಾನ್ ಪಕ್ಕಕ್ಕೆ ಸರಿದು ಅವನನ್ನು ದಿಟ್ಟಿಸಿ ನೋಡಿದಳು. ಅವನೊಬ್ಬ ದಢೂತಿ ಆಸಾಮಿ. ಕನ್ನಡಕ ಧರಿಸಿದ್ದ. ನೋಡಲು ಒಳ್ಳೆಯವನಂತಿದ್ದ.

"ಹೂಂ" ಅವಳು ಸೊಂಟದ ಮೇಲೆ ಕೈಯೇರಿಸಿ ಅವನ ಸಲಹೆಯನ್ನು ಎಚ್ಚರಿಕೆಯಿಂದ ಗಮನಿಸಿದಳು. "ನಿಮ್ಮ ಮಗನ ಜತೆ ಕೆಲಸ ಮಾಡಲಿಕ್ಕೇನು ಅಡ್ಡಿಯಿಲ್ಲ, ಯೋಚಿಸ್ತೇನೆ. ಆದರೆ ನನಗೀಗ ಸ್ವಲ್ಪವೂ ಸಮಯವಿಲ್ಲ. ಹೊಸಾ ಶಾಲೆ ಸೇರಿಕೊಳ್ಳಲು ಹೋಗುತ್ತಿದ್ದೇನೆ" ಎಂದು ಅಮ್ಮನ ಕಡೆ ಓಡಿದಳು. "ನಾನು ದೊಡ್ಡವಳಾದ್ಮೇಲೆ ಟಿಕೇಟು ಮಾರುವ ಕೆಲಸಕ್ಕೆ ಸೇರಿಕೊಳ್ತೇನೆ" ಎಂದು ಅಮ್ಮನಿಗೆ ಹೇಳಿದಳು.

ಅಮ್ಮನಿಗೇನೂ ಆಶ್ಚರ್ಯವಾಗಲಿಲ್ಲ. "ನೀನು ಗೂಢಚಾರಿಣಿಯಾಗ್ತಿಯೇನೋ ಅಂತ ಮಾಡಿದ್ದೆ" ಎಂದಳು ನಗುತ್ತ.

ತೊತ್ತೊ-ಚಾನ್ ನಿನ್ನೆವರೆಗೂ ಗೂಢಚಾರಿಣಿಯಾಗಬಯಸಿದ್ದಳು. ಆದರೆ ಟಿಕೇಟುಗಳಿಂದ ತುಂಬಿದ ಇಡೀ ಪೆಟ್ಟಿಗೆಯೇ ತನ್ನ ಸುಪರ್ದಿನಲ್ಲಿರುವುದಾದರೆ ಅದೆಂಥಾ ಮಜಾ, ಎಂದುಕೊಂಡಳು.

"ಹಾಂ" ಅವಳಿಗೀಗ ಅತ್ಯದ್ಭುತ ಆಲೋಚನೆ ಬಂತು. "ನಾನು ಗೂಢಚಾರಿಣಿ ಹಾಗೂ ಟಿಕೇಟು ಮಾರಾಟಗಾರಳಾಗಲು ಸಾಧ್ಯವಿಲ್ಲವೇನಮ್ಮ?" ಕತ್ತೆತ್ತಿ ಅಮ್ಮನನ್ನೇ ನೋಡುತ್ತಾ ಪ್ರಶ್ನಿಸಿದಳು. ಅಮ್ಮ ಉತ್ತರಿಸಲಿಲ್ಲ. ಕಿರು ಹೂಗಳಿಂದ ಅಲಂಕೃತವಾದ ಹ್ಯಾಟಿನ ಕೆಳಗಿನ ಅವಳ ಮುದ್ದಾದ ಮುಖ ಗಂಭೀರವಾಗಿತ್ತು. ಅಮ್ಮನಿಗೆ ನಿಜವಾಗಿಯೂ ಚಿಂತೆಯಾಗಿತ್ತು. ತೊತ್ತೊ-ಚಾನ್‌ಳನ್ನು ಹೊಸ ಶಾಲೆಯಲ್ಲಿ ಸೇರಿಸಿಕೊಳ್ಳದೇ ಹೋದರೆ? ತೊತ್ತೊ-ಚಾನ್ ತನ್ನ ಪಾಡಿಗೆ ತಾನು ರಸ್ತೆಯುದ್ದಕ್ಕೂ ಜಿಗಿಯುತ್ತಾ ಹರಟುತ್ತಾ ನಡೆಯುತ್ತಿದ್ದಳು. ಅಮ್ಮನ ಚಿಂತೆಯ ಅರಿವು ಲವಲೇಶವೂ ಅವಳಿಗೆ ಇರಲಿಲ್ಲ. ಅಮ್ಮನತ್ತ ನೋಡುತ್ತಾ ಹೇಳಿದಳು. "ನಾನು ಮನಸ್ಸು ಬದಲಾಯಿಸಿದ್ದೇನೆ. ಹೊಸ ಅಂಗಡಿಗಳಿಗಾಗಿ ಪ್ರಚಾರ ಮಾಡುತ್ತಾ ಹೋಗುವ ಬೀದಿ ಸಂಗೀತಗಾರರ ತಂಡವನ್ನು ಸೇರಿಕೊಳ್ಳುತ್ತೇನೆ" ಅಮ್ಮನಿಗೀಗ ನಿಜಕ್ಕೂ ಸಿಟ್ಟು ಬಂತು. "ತಡವಾಗುತ್ತೆ, ಬೇಗ ನಡಿ. ನಾವು ಹೆಡ್‌ಮಾಸ್ತರನ್ನು ಕಾಯಿಸಬಾರದು. ಇನ್ನು ಹರಟೆ ಸಾಕು. ರಸ್ತೆ ನೋಡ್ತಾ ಸರಿಯಾಗಿ ಹೆಜ್ಜೆ ಹಾಕು" ಎಂದಳು.

ಅವರು ನಡೆಯುತ್ತಾ ಹೋದಂತೆ ಸ್ವಲ್ಪ ದೂರದಲ್ಲಿ ಸಣ್ಣ ಶಾಲೆಯೊಂದರ ಗೇಟು ಅವರಿಗೆ ಕಾಣಿಸತೊಡಗಿತು.

ಯಶೋಧ ವಿ ಸ ಹಿ ಪ್ರಾ ಶಾಲೆ
ವಾಟಗರು ತೀರ್ಥಹಳ್ಳಿ

ತರಗತಿ 5 ಅಭ್ಯಾಸ ಹಾಳೆ ದಿನ :11/2

ದಿನ 11/3

ಕಲಿಕಾಂಶ :ಪಠ್ಯ ಭಾಷೆಯ ಪದಗಳ ರಚನೆಯನ್ನು ಗುರುತಿಸುತ್ತಾರೆ

ಚಟುವಟಿಕೆ :ಪದ ಪ್ರಯೋಗ ಪದವಿನೋದ

ಸೂಚನೆ ;ನೀವು ಅಭಿನಯಿಸಿದ ನಾಟದಲ್ಲಿನ ನಿಮಗೆ ವಿಶೇಷವಾದ ಪದಗಳನ್ನು ಪಟ್ಟಿಮಾಡಿ

| | | | |
|---|---|---|---|
| | | | |
| | | | |
| | | | |

ಗ್ರಾಮ್ಯ ಭಾಷೆಯ ಪದಗಳಿಗೆ ಗ್ರಾಂಥಿಕ ರೂಪ ಕೊಡು ವ್ಯತ್ಯಾಸ ಗಮನಿಸು

ಮಾದರಿ :ಓಡ್ತೀನಿ -ಓಡು ತ್ತೇನೆ

| ಗ್ರಾಮ್ಯ ಪದ | ಗ್ರಾಂಥಿಕ | ಗ್ರಾಮ್ಯ | ಗ್ರಾಂಥಿಕ |
|---|---|---|---|
| | | | |
| | | | |
| | | | |
| | | | |

ನಿಮಗೆ ತಿಳಿದಿರುವ ಗ್ರಾಮ್ಯ ಭಾಷೆಗೆ ಗ್ರಾಂಥಿಕ ರೂಪ ಕೊಡು

**ಅಭ್ಯಾಸ ಹಾಳೆ** ದಿನ : 10 .11

ತರಗತಿ: 5 ವಿಷಯ:ಕನ್ನಡ

ಕ್ಷೇತ್ರ:ಮಾತನಾಡುವುದು ಕಲಿವಿನ ಫಲ: ಪರಿಚಿತ/ಅಪರಿಚಿತ ವಸ್ತು/ಘಟನೆಗಳ ಬಗ್ಗೆ ವಿವರಿಸುವರು.

ಸಾಮರ್ಥ್ಯ:ಪರಿಚಿತ ವಸ್ತುಗಳ ಬಗ್ಗೆ ಮಾತನಾಡುತ್ತಾರೆ.

ಚಟುವಟಿಕೆ 1 : ವರ್ಣ ವಿಸ್ತಾರ

ಸೂಚನೆಗಳು: 1 .ಮಕ್ಕಳೇ ಈ ಡಬ್ಬಿಯಲ್ಲಿರುವ ಒಂದೊಂದು ಅಕ್ಷರಗಳನ್ನು ತೆಗೆದುಕೊಂಡು ಆ ಅಕ್ಷರದಿಂದ ಪ್ರಾರಂಭವಾಗುವ 10 ಪದಗಳನ್ನು ಹೇಳಿ.

2 .ನಂತರ ಅದರಲ್ಲಿ ಆಯ್ದ ಒಂದು ವಿಷಯದ ಬಗ್ಗೆ ಒಂದೆರಡು ಮಾತನಾಡು.

ಉದಾಹರಣೆ: ದ :ದಸರ, ದರ,ದನ,ದವಸ,ದರಣಿ,,,,,,,,,,, ಪ ಗ ನ ವ ಚ ತ ____________.

---

ಚಟುವಟಿಕೆ 2 :ನೀನ್ಯಾರು?

ಸೂಚನೆ: ಈ ಕೆಳಗೆ ನೀಡಿರುವ ಪ್ರಾಣಿ/ಪಕ್ಷಿ ಗಳಲ್ಲಿ ನಿನ್ನ ಇಷ್ಟದ ಒಂದು ಪ್ರಾಣಿ/ಪಕ್ಷಿ ಆಯ್ದು ಅದರ ಬಗ್ಗೆ ಒಂದೆರಡು ಮಾತನಾಡು.







---

ಚಟುವಟಿಕೆ 3 :ಸಮಸ್ಯೆಗೊಂದು ದಾರಿ.

ಸಮಸ್ಯೆ__..ಮಕ್ಕಳೇ ಕೊರೊನಾ ಹಾವಳಿ ಹೆಚ್ಚುತ್ತಿರುವ ಕಾರಣ ಶಾಲೆಗೆ ಬರಲು ಆಗದಿರುವುದರಿಂದ ನೀನು ಯಾವ ಯಾವ ವಿಧಾನಗಳಿಂದ ಕಲಿಯಲು ಬಯಸುವೆ?ನಿನ್ನ ಮಾತುಗಳಲ್ಲಿ ತಿಳಿಸುವೆಯಾ_______________

______________________________________________________________________________
__________________ ________________________

ಸಾಮರ್ಥ್ಯ :ಅಪರಿಚಿತ ಘಟನೆಗಳು ಎದುರಾದಗ ಅದನ್ನು ಎದುರಿಸುವುದನ್ನು ಅರಿಯುವರು.

ಚಟುವಟಿಕೆ 1:ಈ ಕೆಳಗಿನ ಚಿತ್ರ ನೋಡಿ ಇಲ್ಲಿ ನೀಡಬಹುದಾದ ಸೂಚನೆಗಳನ್ನು ಪಟ್ಟಿ ಮಾಡು.



______________________________________________________________________________
__________________

. ಸಾಮರ್ಥ್ಯ :ಘಟನೆಗಳನ್ನು ಅರಿತು ವಿವರಿಸುತಾರ್ತೆ.

ಚಟುವಟಿಕೆ 1: ನಾನವನಾದರೆ? ಶಿಕ್ಷಕರು ಈ ಕೆಳಗೆ ನೀಡಿರುವ ಚಿತ್ರಗಳನ್ನು ಪ್ರದರ್ಶಿಸುತ್ತಾ ಮಕ್ಕಳಿಗೆ ನೀವು ಈ ಪಾತ್ರ್ರಧಾರಿಯಾದರೆ ಏನು ಕಾರ್ಯ ಮಾಡುವೆ ? ಎಂದು ಕೇಳುತ್ತಾ ಉತ್ತರ ಪಡೆಯುವರು
















. ಶ್ರೀದೇವಿ ಡಿ

Edit with WPS Office

ತರಗತಿ :5 ಅಭ್ಯಾಸ ಹಾಳೆ ದಿನ :12/1

**ಕಲಿಕಾ ಫಲ ;ಆಡು ಭಾಷೆಯ ಪದಗಳನ್ನು ಪಠ್ಯಭಾಷೆಗೆ ಪಠ್ಯಭಾಷೆಯ ಪದಗಳನ್ನು ಆಡುಭಾಷೆಗೆ ಬದಲಿಸುತ್ತಾರೆ**

## ಚಟುವಟಿಕೆ :ನಾಟಕದಾಗ್ಪಾರ್ಟು



**ರೈಲು ನಿಲ್ದಾಣ**

ಜಿಯುಗಾವ್ತೋಕ ನಿಲ್ದಾಣದಲ್ಲಿ, ಓಯಿಮಾಚಿ ರೈಲಿನಿಂದ ಇಳಿದು ತೊತ್ತೊ-ಚಾನ್‌ಳ ತಾಯಿ ಮಗಳ ಕೈಹಿಡಿದು, ಟಿಕೇಟ್ ತೋರಿಸಿ ಹೊರಬರುವ ಗೇಟಿನ ಕಡೆ ನಡೆದಳು. ತೊತ್ತೊ-ಚಾನ್ ಈ ಮೊದಲು ರೈಲಿನಲ್ಲಿ ಪ್ರಯಾಣಿಸಿದ್ದಿಲ್ಲವೆಂದೇ ಹೇಳಬೇಕು. ತನ್ನ ಮುಷ್ಟಿಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡಿದ್ದ ಅಮೂಲ್ಯವಾದ ಟಿಕೇಟುಗಳನ್ನು ಕೊಟ್ಟುಬಿಡಲು ಅವಳು ತಯಾರಿರಲಿಲ್ಲ.

"ನಾನಿದನ್ನ ಇಟ್ಟುಕೊಳ್ಳಲಾ ?" ತೊತ್ತೊ-ಚಾನ್ ಟಿಕೇಟು ಕಲೆಕ್ಟರನನ್ನು ಕೇಳಿದಳು. "ಇಲ್ಲ ನೀನು ಹಾಗೆ ಮಾಡಲು ಸಾಧ್ಯವಿಲ್ಲ" ಎನ್ನುತ್ತಲೇ ಆತ ಅವಳಿಂದ ಟಿಕೇಟನ್ನು ಪಡೆದ.

"ಅವೆಲ್ಲಾ ನಿಮ್ಮದೇನಾ ?" ಟಿಕೇಟುಗಳಿಂದ ತುಂಬಿದ ಅವನ ಪೆಟ್ಟಿಗೆಯತ್ತ ತೋರಿಸುತ್ತಾ ಆಕೆ ಕೇಳಿದಳು.

"ಇಲ್ಲ, ಅವೆಲ್ಲಾ ರೈಲು ನಿಲ್ದಾಣಕ್ಕೆ ಸೇರಿದವು" ಹೊರಹೋಗುವ ಜನರಿಂದ ಟಿಕೇಟು ಕಸಿದುಕೊಳ್ಳುತ್ತಾ ಅವನೆಂದ.

"ಓಹೋ" ತೊತ್ತೊ-ಚಾನ್ ಪೆಟ್ಟಿಗೆಯತ್ತಲೇ ನೋಡುತ್ತಾ "ನಾನು ದೊಡ್ಡವಳಾದ ಮೇಲೆ ರೈಲು ಟಿಕೇಟುಗಳನ್ನು ಮಾರುತ್ತೇನೆ" ಎಂದಳು.

ಇದೀಗ ಟಿಕೇಟು ಕಲೆಕ್ಟರ್ ಅವಳತ್ತ ನೋಡಿದ. "ನನ್ನ ಸಣ್ಣ ಮಗನೂ ರೈಲ್ವೇ ನಿಲ್ದಾಣದಲ್ಲೇ ಕೆಲಸ ಮಾಡುತ್ತಾನಂತೆ. ನೀವಿಬ್ಬರೂ ಕೂಡಿಯೇ ಕೆಲಸ ಮಾಡಬಹುದು !" ಎಂದ.

ತೊತ್ತೊ-ಚಾನ್ ಪಕ್ಕಕ್ಕೆ ಸರಿದು ಅವನನ್ನು ದಿಟ್ಟಿಸಿ ನೋಡಿದಳು. ಅವನೊಬ್ಬ ದಢೂತಿ ಆಸಾಮಿ. ಕನ್ನಡಕ ಧರಿಸಿದ್ದ. ನೋಡಲು ಒಳ್ಳೆಯವನಂತಿದ್ದ.

"ಹೂಂ" ಅವಳು ಸೊಂಟದ ಮೇಲೆ ಕೈಯೇರಿಸಿ ಅವನ ಸಲಹೆಯನ್ನು ಎಚ್ಚರಿಕೆಯಿಂದ ಗಮನಿಸಿದಳು. "ನಿಮ್ಮ ಮಗನ ಜತೆ ಕೆಲಸ ಮಾಡಲಿಕ್ಕೇನು ಅಡ್ಡಿಯಿಲ್ಲ, ಯೋಚಿಸ್ತೇನೆ. ಆದರೆ ನನಗೀಗ ಸ್ವಲ್ಪವೂ ಸಮಯವಿಲ್ಲ. ಹೊಸಾ ಶಾಲೆ ಸೇರಿಕೊಳ್ಳಲು ಹೋಗುತ್ತಿದ್ದೇನೆ" ಎಂದು ಅಮ್ಮನ ಕಡೆ ಓಡಿದಳು. "ನಾನು ದೊಡ್ಡವಳಾದ್ಮೇಲೆ ಟಿಕೇಟು ಮಾರುವ ಕೆಲಸಕ್ಕೆ ಸೇರಿಕೊಳ್ತೇನೆ" ಎಂದು ಅಮ್ಮನಿಗೆ ಹೇಳಿದಳು.

ಅಮ್ಮನಿಗೇನೂ ಆಶ್ಚರ್ಯವಾಗಲಿಲ್ಲ. "ನೀನು ಗೂಢಚಾರಿಣಿಯಾಗ್ತಿಯೇನೋ ಅಂತ ಮಾಡಿದ್ದೆ" ಎಂದಳು ನಗುತ್ತ.

ತೊತ್ತೊ-ಚಾನ್ ನಿನ್ನೆವರೆಗೂ ಗೂಢಚಾರಿಣಿಯಾಗಬಯಸಿದ್ದಳು. ಆದರೆ ಟಿಕೇಟುಗಳಿಂದ ತುಂಬಿದ ಇಡೀ ಪೆಟ್ಟಿಗೆಯೇ ತನ್ನ ಸುಪರ್ದಿನಲ್ಲಿರುವುದಾದರೆ ಅದೆಂಥಾ ಮಜಾ, ಎಂದುಕೊಂಡಳು.

"ಹಾಂ" ಅವಳಿಗೀಗ ಅತ್ಯದ್ಭುತ ಆಲೋಚನೆ ಬಂತು. "ನಾನು ಗೂಢಚಾರಿಣಿ ಹಾಗೂ ಟಿಕೇಟು ಮಾರಾಟಗಾರಳಾಗಲು ಸಾಧ್ಯವಿಲ್ಲವೇನಮ್ಮ?" ಕತ್ತೆತ್ತಿ ಅಮ್ಮನನ್ನೇ ನೋಡುತ್ತಾ ಪ್ರಶ್ನಿಸಿದಳು. ಅಮ್ಮ ಉತ್ತರಿಸಲಿಲ್ಲ. ಕಿರು ಹೂಗಳಿಂದ ಅಲಂಕೃತವಾದ ಹ್ಯಾಟಿನ ಕೆಳಗಿನ ಅವಳ ಮುದ್ದಾದ ಮುಖ ಗಂಭೀರವಾಗಿತ್ತು. ಅಮ್ಮನಿಗೆ ನಿಜವಾಗಿಯೂ ಚಿಂತೆಯಾಗಿತ್ತು. ತೊತ್ತೊ-ಚಾನ್‌ಳನ್ನು ಹೊಸ ಶಾಲೆಯಲ್ಲಿ ಸೇರಿಸಿಕೊಳ್ಳದೇ ಹೋದರೆ? ತೊತ್ತೊ-ಚಾನ್ ತನ್ನ ಪಾಡಿಗೆ ತಾನು ರಸ್ತೆಯುದ್ದಕ್ಕೂ ಜಿಗಿಯುತ್ತಾ ಹರಟುತ್ತಾ ನಡೆಯುತ್ತಿದ್ದಳು. ಅಮ್ಮನ ಚಿಂತೆಯ ಅರಿವು ಲವಲೇಶವೂ ಅವಳಿಗೆ ಇರಲಿಲ್ಲ. ಅಮ್ಮನತ್ತ ನೋಡುತ್ತಾ ಹೇಳಿದಳು. "ನಾನು ಮನಸ್ಸು ಬದಲಾಯಿಸಿದ್ದೇನೆ. ಹೊಸ ಅಂಗಡಿಗಳಿಗಾಗಿ ಪ್ರಚಾರ ಮಾಡುತ್ತಾ ಹೋಗುವ ಬೀದಿ ಸಂಗೀತಗಾರರ ತಂಡವನ್ನು ಸೇರಿಕೊಳ್ಳುತ್ತೇನೆ" ಅಮ್ಮನಿಗೀಗ ನಿಜಕ್ಕೂ ಸಿಟ್ಟು ಬಂತು. "ತಡವಾಗುತ್ತೆ, ಬೇಗ ನಡಿ. ನಾವು ಹೆಡ್‌ಮಾಸ್ತರನ್ನು ಕಾಯಿಸಬಾರದು. ಇನ್ನು ಹರಟೆ ಸಾಕು. ರಸ್ತೆ ನೋಡ್ತಾ ಸರಿಯಾಗಿ ಹೆಜ್ಜೆ ಹಾಕು" ಎಂದಳು.

ಅವರು ನಡೆಯುತ್ತಾ ಹೋದಂತೆ ಸ್ವಲ್ಪ ದೂರದಲ್ಲಿ ಸಣ್ಣ ಶಾಲೆಯೊಂದರ ಗೇಟು ಅವರಿಗೆ ಕಾಣಿಸತೊಡಗಿತು.

ಪೋಷಕರಿಗೆ ಸೂಚನೆ :ಇಲ್ಲಿರುವ ಕತೆ ಓದಿಕೊಂಡು ಹಳ್ಳಿ /ಗ್ರಾಮ್ಯ ಭಾಷೆಯಲ್ಲಿ ಮಾತನಾಡಲು ನಾಟಕಾಭಿನಯದ ಮೂಲಕ ಪ್ರತಿಕ್ರಿಯಿಸಲು ಪ್ರೇರೇಪಿಸುವುದು

## ಚಟುವಟಿಕೆ 2ರೂಪ ಪ್ರತಿರೂಪ

ಮಕ್ಕಳೇ ಪಠ್ಯ ಭಾಷೆಯ ಪದಗಳನ್ನು ಆಡುಭಾಷೆಯಾಗಿ ಹೇಗೆ ಬಳಸಿಕೊಂಡಿರೆಂದು ಪಟ್ಟಿಮಾಡೋಣಮಾದರಿ :ಸೇರಿದೆವು -ಸೇರಿದ್ವಿ

Edit with WPS Office

## ಚಟುವಟಿಕೆ 3:ವಾಕ್ಯರಚನೆ

ಮಕ್ಕಳು ಪಟ್ಟಿ ಮಾಡಿದ ಪದ ಗಳನ್ನು ಪದಗಳನ್ನು ಬಳಸಿ ತಮ್ಮದೇ ಆದ ಸ್ವಂತ ವಾಕ್ಯಗಳನ್ನು ರಚಿಸಲು ಅನುಕೂಲಿಸುವುದು

| |
|---|
| |
| |
| |
| |
| |

ಯಶೋಧ ವಿ ಸ ಹಿ ಪಾ, ಶಾ ವಾಟಗಾರು tth

Edit with WPS Office

ತರಗತಿ :5 ಅಭ್ಯಾಸ ಹಾಳೆ ದಿನ :13/1&13/2

ಕಲಿಕೆ ಫಲ :ಓದಿದ ಪಠ್ಯದಲ್ಲಿನ ಘಟನಾವಳಿಗಳಿಗೆ ಇರುವ ಸರಳ ಕಾರ್ಯಕಾರಣ ಸಂಬಂಧ ಗಳನ್ನು ಗುರುತಿಸಿ ಹೇಳುವರು

ಕಲಿಕಾಂಶ /ಸಾಮರ್ಥ್ಯ ;ಓದಿದ ಘಟನೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ

ಚಟುವಟಿಕೆ :13/1ಹಾಡು ಬಾ ಕೋಗಿಲೆ "

" ನಾನ್ಯಾರೆ ಪುಟ್ನಂಜಿ "

ಯಾಕೆ ಬಡೆದಾಡ್ತಿ ತಮ್ಮ ಮಾಯಾ ಮೆಚ್ಚಿ ಸಂಸಾರ ಮೆಚ್ಚಿ
ಯಾಕೆ ಬಡೆದಾಡ್ತಿ ತಮ್ಮ ಮಾಯಾ ಮೆಚ್ಚಿ ಸಂಸಾರ ಮೆಚ್ಚಿ |
ನೀನೋಗದರಿಯೇ ತಮ್ಮ ಕಣ್ಣ ಮುಚ್ಚಿ ಮಣ್ಣ ಮುಚ್ಚಿ||

ಹೆಂಡ್ರು ಮಕ್ಕಳಿರುವರು ತಮ್ಮ ಎಲ್ಲಿ ತನಕ |
ಇದ್ದರೆ ತಿಂಬೋತನಕ ||
ಸತ್ತಾಗ ಬರುವರು ತಮ್ಮ ಕುಣಿತನಕ |
ಮಣ್ಣು ಮುಚ್ಚೋತನಕ ||



ಅಣ್ಣ ತಮ್ಮ ಅಕ್ಕ ತಂಗಿ ಎಲ್ಲಿತನಕ |
ಬದುಕಿ ಬೆಳೆಯೋತನಕ ||
ಸತ್ತಾಗ ಬರುವರು ತಮ್ಮ ಕುಣಿತನಕ |
ಮಣ್ಣು ಮುಚ್ಚೋತನಕ ||

ಹೆಣ್ಣು ಹೊನ್ನು ಮಣ್ಣು ನಿನ್ನದು ಎಲ್ಲಿತನಕ |
ನಿನ್ನ ಕೊರಳಿಗೆ ಕುಣಿಕೆ ಬಿಳೋತನಕ ||
ನಿನ್ನಾಸೆ ಪ್ರಾಣ ಪಕ್ಷಿ ಹಾರೋ ತನಕ |
ಕಳಚಯ್ಯ ಮಾಯದ ಪೊರೆಯ ಮುಕ್ತಿ ಹೊಂದಾಕ ||




ಈ ಜಾನಪದ ಗೀತೆ ಹಾಡಲು ಅಭ್ಯಾಸ ಮಾಡಿ

ಇಲ್ಲಿ ಬರುವ ಪಾತ್ರ ಹೆಸರಿಸಿ
ಅದರ ವಿಶೇಷತೆ ಏನು?

Edit with WPS Office

ಅಭಿನಯಿಸುತ್ತ ಹಾಡಿ



ಇವನು ಕುಣಿಸುವ ಕರಡಿ, ಪಾಪ! ಯಾವ ಕಾಡಿನ ಅಡವಿಯಲ್ಲಿ ಜೇನನ್ನು (ಜೇನುತುಪ್ಪವನ್ನು) ತಿಂದು ಬೆಳೆಯುತ್ತಿತ್ತೋ, ಆದರೆ ಇವನು ಅದನ್ನು ಹಿಡಿದು ತಂದು, ತಾನು ಹೇಳುವಂತೆ ಮಾಡಲು ಕಲಿಸಿ ಕೊಟ್ಟಿದ್ದಾನೆ. ಆದ್ದರಿಂದ ಅದು ಅವನು ಹೇಳಿದಂತೆ ಅವನ ಕೈಗೊಂಬೆಯಾಗಿ ಕುಣಿಯುತ್ತದೆ. ಧಣಿ (ಒಡೆಯರ)ಯರ ಮನೆ ಮುಂದೆ ಕಾವಲು ಮಾಡು, ಅವರು ನಿನಗೆ ದಾನ ಕೊಡುತ್ತಾರೆ ಎಂದು ದಾನಿಗಳನ್ನು ಹೊಗಳುತ್ತಾನೆ. ಆತನು ಕರಡಿಯ ವಿಶೇಷತೆಯ ಬಗ್ಗೆ ಈ ರೀತಿ ಹೇಳುತ್ತಾನೆ. ಈ ಕರಡಿಯು ತ್ರೇತಾಯುಗದಲ್ಲಿ ಶ್ರೀರಾಮನನ್ನು, ದ್ವಾಪರಯುಗದಲ್ಲಿ ಕೃಷ್ಣನನ್ನು, ಈ ಕಲಿಯುಗದಲ್ಲಿ ಕಲ್ಕಿಯನ್ನು ನೋಡಿದ್ದಾನೆ.

ಈ ದೃಶ್ಯದಲ್ಲಿರುವ ಪಾತ್ರ ಹೆಸರಿಸು :

## ಚಟುವಟಿಕೆ 13/3:ಹಾಡಿದ ಹಾಡನ್ನು ಬರೆಸುವುದು

| ಒತ್ತಕ್ಷರ | ಗುಣಿತಾಕ್ಷರ | ಪ್ರಾಸಪದ |
|---|---|---|
| | | |
| | | |

ಈ ಹಾಡಿನಲ್ಲಿ ಬರುವ ಒತ್ತಕ್ಷರ ಪ್ರಾಸಪದ ಒತ್ತಕ್ಷರ ಪಟ್ಟಿ ಮಾಡು

ಯಶೋಧ ವಿ ಸ ಹಿ ಪ್ರಾ ಶಾಲೆ
ವಾಟಗಾರು ತೀರ್ಥಹಳ್ಳಿ ಶಿವಮೊಗ್ಗ
ಜಿಲ್ಲೆ

1. **ಈ ಕೆಳಗಿನ ಗೋವಿನ ಹಾಡನ್ನು ಕೇಳಿ  ಹಾಗೂ ಕಥೆಯ ರೂಪದಲ್ಲಿ ಬರೆಯಿರಿ.**

## ದಿನ -14

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ಣಾಟ ದೇಶದೊಳಿರುವ
ಕಾಳಿಂಗನೆಂಬ ಗೊಲ್ಲನ ಪರಿಯನೆಂತು ಪೇಳ್ವೆನು

ಎಳೆಯ ಮಾವಿನ ಮರದ ಕೆಳಗೆ
ಕೊಳಲನೂದುತ ಗೊಲ್ಲ ಗೌಡನು
ಬಳಸಿ ನಿಂದ ತುರುಗಳನ್ನು
ಬಳಿಗೆ ಕರೆದನು ಹರುಶದಿ

ಗಂಗೆ ಬಾರೆ ಗೌರಿ ಬಾರೆ
ತುಂಗಭದ್ರೆ ತಾಯಿ ಬಾರೆ
ಪುಣ್ಯಕೋಟಿ ನೀನು ಬಾರೆ
ಎಂದು ಗೊಲ್ಲನು ಕರೆದನು

ಗೊಲ್ಲ ಕರೆದ ದನಿಯ ಕೇಳಿ
ಎಲ್ಲ ಹಸುಗಳು ಬಂದು ನಿಂದು
ಚೆಲ್ಲಿ ಸೂಸಿ ಹಾಲು ಕರೆಯಲು
ಅಲ್ಲಿ ತುಂಬಿತು ಬಿಂದಿಗೆ

ಸತ್ಯವೇ ಭಗವಂತನೆಂಬ ಪುಣ್ಯಕೋಟಿಯ ಕತೆಯಿದು...

ಹಬ್ಬಿದಾ ಮಲೆ ಮಧ್ಯದೊಳಗೆ
ಅರ್ಭುತಾನೆಂದೆಂಬ ವ್ಯಾಘ್ರನು
ಅಬ್ಬರಿಸಿ ಹಸಿಹಸಿದು ಬೆಟ್ಟದ
ಕಿಬ್ಬಿಯೊಳು ತಾನಿದ್ದನು

ಮೊರೆದು ರೋಷದಿ ಗುಡುಗುತಾ ಹುಲಿ
ಗುಡುಗುಡಿಸಿ ಭೋರಿಡುತ ಚಂಗನೆ
ಗುಡುಗಲೆರಗಿದ ರಭಸಕಂಜಿ
ಚೆದುರಿ ಹೋದವು ಹಸುಗಳು

ಪುಣ್ಯಕೋಟಿ ಎಂಬ ಹಸುವು
ತನ್ನ ಕಂದನ ನೆನೆದುಕೊಂಡು
ಮುನ್ನ ಹಾಲನು ಕೊಡುವೆನೆನುತ
ಚೆಂದದಿ ತಾ ಬರುತಿರೆ

ಇಂದೆನಗೆ ಆಹಾರ ಸಿಕ್ಕಿತು
ಎಂದು ಬೇಗನೆ ದುಷ್ಟ ವ್ಯಾಘ್ರನು
ಬಂದು ಬಳಸಿ ಅಡ್ಡಗಟ್ಟಿ
ನಿಂದನಾ ಹುಲಿರಾಯನು

ಮೇಲೆ ಬಿದ್ದು ನಿನ್ನನೀಗಲೆ
ಬೀಳಹೊಯ್ವೆನು ನಿನ್ನ ಹೊಟ್ಟೆಯ
ಸೀಳಿಬಿಡುವೆನು ಎನುತ ಕೋಪದಿ
ಖೂಳ ವ್ಯಾಘ್ರನು ಕೂಗಲು

ಒಂದು ಬಿನ್ನಹ ಹುಲಿಯೆ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ಸೇರುವೆನಿಲ್ಲಿಗೆ

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶವ ಮಾಡದೆ ಬಿಡಲು ನೀನು
ನುಸುಳಿ ಹೋಗುವೆ, ಮತ್ತೆ ಬರುವೆಯ
ಹುಸಿಯನಾಡುವೆ ಎಂದಿತು

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಬಂಧು ಬಳಗ
ಸತ್ಯ ವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು

ಸತ್ಯವೇ ಭಗವಂತನೆಂಬ ಪುಣ್ಯಕೋಟಿಯ ಕತೆಯಿದು....

ಕೊಂದು ತಿನ್ನುವೆನೆಂಬ ಹುಲಿಗೆ
ಚೆಂದದಿಂದ ಭಾಷೆ ಇತ್ತು
ಕಂದ ನಿನ್ನನು ನೋಡಿ ಪೋಗುವೆ
ನೆಂದು ಬಂದೆನು ದೊಡ್ಡಿಗೆ

ಆರ ಮೊಲೆಯನು ಕುಡಿಯಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರ ಸೇರಿ ಬದುಕಲಮ್ಮ
ಆರು ನನಗೆ ಹಿತವರು

ಅಮ್ಮಗಳಿರಾ ಅಕ್ಕಗಳಿರಾ
ಎನ್ನ ತಾಯೊಡ ಹುಟ್ಟುಗಳಿರಾ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು

ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು

ತಬ್ಬಲಿಯು ನೀನಾದೆ ಮಗನೆ
ಹೆಬ್ಬುಲಿಯ ಬಾಯನ್ನು ಹೊಗುವೆನು
ಇಬ್ಬರಾ ಋಣ ತೀರಿತೆಂದು
ತಬ್ಬಿಕೊಂಡಿತು ಕಂದನ

ಸತ್ಯವೇ ಭಗವಂತನೆಂಬ ಪುಣ್ಯಕೋಟಿಯ ಕತೆಯಿದು....

ಗೋವು ಕರುವನು ಬಿಟ್ಟು ಬಂದು
ಸಾವಕಾಶವ ಮಾಡದಂತೆ
ಗವಿಯ ಬಾಗಿಲ ಸೇರಿನಿಂತು
ತವಕದಲಿ ಹುಲಿಗೆಂದಿತು

ಖಂಡವಿದೆಕೊ ಮಾಂಸವಿದೆಕೊ
ಗುಂಡಿಗೆಯ ಬಿಸಿರಕ್ತವಿದೆಕೊ
ಚಂಡವ್ಯಾಘ್ರನೆ ನೀನಿದೆಲ್ಲವ
ನುಂಡು ಸಂತಸದಿಂದಿರು

ಪುಣ್ಯಕೋಟಿಯ ಮಾತ ಕೇಳಿ
ಕಣ್ಣನೀರನು ಸುರಿಸಿ ನೊಂದು
ಕನ್ನೆಯಿವಳನು ಕೊಂದು ತಿಂದರೆ
ಮೆಚ್ಚನಾ ಪರಮಾತ್ಮನು

ಎನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ಏನ ಪಡೆವೆನು
ಎನ್ನುತಾ ಹುಲಿ ಹಾರಿ ನೆಗೆದು
ತನ್ನ ಪ್ರಾಣವ ಬಿಟ್ಟಿತು

ಸತ್ಯವೇ ಭಗವಂತನೆಂಬ ಪುಣ್ಯಕೋಟಿಯ ಕತೆಯಿದು.....

ಪುಣ್ಯಕೋಟಿಯು ನಲಿದು ಕರುವಿಗೆ
ಉಣ್ಣಿಸೀತು ಮೊಲೆಯ ಬೇಗದಿ
ಚೆನ್ನಗೊಲ್ಲನ ಕರೆದು ತಾನು
ಮುನ್ನ ತಾನಿಂತೆಂದಿತು

ಎನ್ನ ವಂಶದ ಗೋವ್ಗಳೊಳಗೆ
ನಿನ್ನ ವಂಶದ ಗೊಲ್ಲರೊಳಗೆ
ಮುನ್ನ ಪ್ರತಿ ಸಂಕ್ರಾಂತಿಯೊಳಗೆ
ಚೆನ್ನ ಕೃಷ್ಣನ ಭಜಿಸಿರಿ

ಈವನು ಸೌಭಾಗ್ಯ ಸಂಪದ
ಭಾವಜಾಪಿತ ಕೃಷ್ಣನು

[ಹಾಡಿನ ಆಡಿಯೋಗಾಗಿ

ಇಲ್ಲಿ ಕ್ಲಿಕ್ ಮಾಡಿ]

2. **ಕೇಳಿದ ಹಾಡನ್ನುನಿಮ್ಮದೇ ವಾಕ್ಯಗಳಲ್ಲಿ ಕಥೆಯ ರೂಪದಲ್ಲಿ ಬರೆಯಿರಿ.**

3. **ಕೆಳಗಿನ ನ ಪ್ರಶ್ನೆಗಳಿಗೆ ಉತ್ತರಿಸಿರಿ**

**ಅ. ಈ ಹಾಡಿನಲ್ಲಿ ಬರುವ ಘಟನೆ ಯಾವ ಸ್ಥಳದಲ್ಲಿ ನಡೆದಿದೆ ?**

______________________________________________________________________________

**ಆ. ಈ ಹಾಡಿನಲ್ಲಿ ನೀನು ಗಮನಿಸಿದ ಪ್ರಾಣಿಗಳನ್ನು ಹೆಸರಿಸಿರಿ.**

______________________________________________________________________________

**ಇ. ಪುಣ್ಯ ಕೋಟಿ ಹಸುವಿನ ಕಥೆಯಿಂದ ನಾವು ಕಲಿಯಬಹುದಾದ ಮೌಲ್ಯ ಯಾವುದು ?**

**4 . ಪುಣ್ಯಕೋಟಿ ಹಸುವಿನ ಕಥೆಯಿಂದ ನಾವು ಕಲಿಯಬಹುದಾದ ಗುಣಗಳನ್ನು ಪಟ್ಟಿ ಮಾಡಿ.**

**ರೇಣುಕಾರಾಧ್ಯ**

**ಪಿ.ಪಿ**

# ಕನ್ನಡ-ಅಭ್ಯಾಸ ಹಾಳೆ

ವಿಧ್ಯಾರ್ಥಿಯ ಹೆಸರು: _______ ತರಗತಿ: 5 ದಿ: _________ ದಿನ:15

ಕ್ಷೇತ್ರ ; ಮಾತನಾಡುವುದು.

ಕಲಿಕಾಫಲ;- ವಿಚಾರ ಸರಣಿಗಳನ್ನು ಹೊಂದಿಸುತ್ತಾ ಕಾರ್ಯಕಾರಣ ಸಂಬಂಧಗಳನ್ನು ಅರ್ಥೈಸುತ್ತಾರೆ.

## ಚಟುವಟಿಕೆ-1 ಅವರ್ಭಿಟ್ ಇವರ್ಬಿಟ್ ಅವರ್ಯಾರು?

ಕೆಳಗೆ ಕೊಟ್ಟಿರುವ ಕಥೆಯನ್ನು ಓದಿ ಆ ಕತೆಯ ಪಾತ್ರಗಳ ನಡುವೆ ಇರುವ ಸಂಬಂಧಗಳು, ಅವುಗಳ ಪ್ರಾಮುಖ್ಯತೆ ಬಗ್ಗೆ ತಮ್ಮದೇ ಆದ ಅಭಿಪ್ರಾಯ ಹೇಳಲು ಅವಕಾಶ ಕಲ್ಪಿಸುವುದು.

### ಪಾಠ ಕಲಿತ ರೈತ

ಒಂದು ಸಣ್ಣ ಹಳ್ಳಿಯಲ್ಲಿ, ಒಬ್ಬ ರೈತ ದೊಡ್ಡ ಹಣ್ಣಿನ ತೋಟವನ್ನು ಮಾಡಿದ್ದ. ಆ ತೋಟದಲ್ಲಿ ಹಲವು ಜಾತಿಯ ಹಣ್ಣುಗಳ ಮರಗಳಿದ್ದವು. ಒಂದು ದಿನ ಆತನ ಸ್ನೇಹಿತ ಭೇಟಿಕೊಟ್ಟ. ಹಣ್ಣುಗಳನ್ನು ಬಿಡದಿರುವ ಮರವೊಂದು ಆ ತೋಟದಲ್ಲಿತ್ತು. ಆ ಮರವನ್ನು ನೋಡಿದ ಸ್ನೇಹಿತ, ರೈತನನ್ನು "ನೀನು ಇದನ್ನು ಯಾಕೆ ಕಡಿಯಬಾರದು "? ಎಂದು ಕೇಳಿದ.

ಮರುದಿನ ರೈತ ಮರ ಕಡಿಯಲು ಕೊಡಲಿ ಸಮೇತ ಬಂದ. ಕೆಲವೊಂದು ಪಕ್ಷಿಗಳು ಮರದ ಮೇಲೆ ಗೂಡು ಕಟ್ಟಿ ವಾಸಿಸುತ್ತಿದ್ದವು. ಮರ ಕಡಿಯದಿರುವಂತೆ ಅವು ರೈತನನ್ನು ಬೇಡಿಕೊಂಡವು. ಆದರೆ ರೈತ ಪಕ್ಷಿಗಳ ಮಾತಿಗೆ ಕಿವಿಗೊಡಲಿಲ್ಲ. ಕೊಡಲಿಯಿಂದ ಮರ ಕಡಿಯುವುದಕ್ಕೆ ಶುರುಮಾಡಿದ. ಮರದ ಕಾಂಡದಲ್ಲಿ ಸಣ್ಣ ರಂಧ್ರವಾಯ್ತು ಇದ್ದಕ್ಕಿದ್ದ ಹಾಗೆ ಆ ಮರದ ಪೊಟರೆಯೊಳಗೆ ತುಂಬಾ ಜೇನು ಹುಳುಗಳು ಗೂಡು ಕಟ್ಟರುವುದನ್ನು ಕಂಡ ರೈತ ಮರ ಕಡಿಯುವುದನ್ನು ನಿಲ್ಲಿಸಿದ. ಮರ ಕಡಿಯುವ ಯೋಜನೆ ಕೈಬಿಟ್ಟಿದ್ದಕ್ಕೆ ಪಕ್ಷಿಗಳಿಗೆ ತುಂಬಾ ಖುಷಿಯಾಯಿತು. ಅವು ರೈತನಿಗೆ ಧನ್ಯವಾದ ಹೇಳಿದವು. "ಈ ಮರದ ಮೌಲ್ಯ ಎಷ್ಟು ಎಂಬುದು ನನಗೆ ಈಗ ಅರಿವಾಯಿತು" ಎಂದ ರೈತ.

ಮಕ್ಕಳೇ, ರೈತ, ರೈತನ ಸ್ನೇಹಿತ, ಮರ, ಪಕ್ಷಿಗಳು, ಜೇನುಹುಳು ಇವುಗಳ ಬಗ್ಗೆ ನಿನಗೇನನ್ನಿಸುತ್ತದೆ ಹೇಳುವಿರಾ?

## ಚಟುವಟಿಕೆ-2 ನಾನಾದ್ಮೇಲೆ ಯಾರು?

ಕೆಳಗೆ ನೀಡಿರುವ ಕಥಾ ಸರಣಿಯು ಅದಲು ಬದಲಾಗಿದ್ದು ಯಾವ ಘಟನೆ ನಂತರ ಯಾವ ಘಟನೆ ನಡೆಯುತ್ತದೆ ಎಂದು ಅರಿತುಕೊಂಡು ವಾಕ್ಯಗಳಲ್ಲಿ ಒಂದರ ನಂತರ ಒಂದು ಪುನರ್ ಜೋಡಿಸಲು ತಿಳಿಸುವುದು.

- ಕೊಳವೊಂದರಲ್ಲಿ ತಾವರೆ ಹೂಗಳು ಅರಳಿದ್ದವು. ಕೊಳದ ದಡದಲ್ಲಿ ಮಲ್ಲಿಗೆ, ಸಂಪಿಗೆ, ಗುಲಾಬಿ ಗಿಡಗಳು ಇದ್ದವು.
- ತಾವರೆಯು ಮೊದಲು ಗುಲಾಬಿ ಮನೆಗೆ ಹೋಯಿತು. ಗುಲಾಬಿ ಗಿಡದ ಮನೆಗೆ ಹೋದಾಗ ಅದರ ಮುಳ್ಳುಗಳು ಚುಚ್ಚಿದವು.
- ಕೊಳದಲ್ಲಿದ್ದ ಒಂದು ತಾವರೆ ಹೂವಿಗೆ ತಾನು ಸುಂದರವಾಗಿ ಇರುವೆನೆಂಬ ಜಂಭ ಇತ್ತು. ತಾನು ಈ ಕೆಸರಿನಲ್ಲಿ ಇರುವುದು ಸರಿಯಲ್ಲ ಎಂದುಕೊಂಡಿತು. ಸಂಪಗೆ, ಗುಲಾಬಿ, ಮಲ್ಲಿಗೆಗಳೊಂದಿಗೆ

ಗೆಳೆತನ ಬೆಳೆಸಿತು. ಅವುಗಳ ಜೊತೆ ಜೊತೆ ವಾಸ ಮಾಡಲು ಬಯಸಿತು.

- ಸಂಪಿಗೆ ಮರವನ್ನು ಹತ್ತಲಾಗಲಿಲ್ಲ, ಕೊನೆಗೆ ಕೆಸರಿನಲ್ಲಿದ್ದರೆ ಮಾತ್ರ ತಾನು ಬದುಕಲು ಸಾಧ್ಯ ಎಂಬ ಅರಿವು ತಾವರೆಗೆ ಆಯ್ತು. ಆಗ ತನ್ನ ಕೆಸರಿನ ಕೊಳಕ್ಕೆ ಹೋಯ್ತು.
- ಬೇಸರಗೊಂಡ ತಾವರೆಯು ಮನೆಗೆ ಹೋಯಿತು. ಅಲ್ಲಿ ಬಳ್ಳಿಗಳ ಮೇಲೆ ಗಾಳಿಗೆ ತೂಗಾಡಲಾಗದೆ ಸಂಪಿಗೆಯ ಮನೆಗೆ ಹೋಯಿತು.
- ಪ್ರೀತಿಯ ಮಕ್ಕಳೇ ಈ ಕಥೆಯನ್ನು ಪೂರ್ಣ ಓದಿದ ಮೇಲೆ ಅರ್ಥಮಾಡಿಕೊಂಡು ನಿಮ್ಮ ಹಿರಿಯರಿಗೆ, ಶಿಕ್ಷಕರಿಗೆ ಕಥೆಯನ್ನು ಅರ್ಥಪೂರ್ಣವಾಗಿ ಜೋಡಿಸಿ ಸೂಕ್ತ ಹಾವಭಾದೊಂದಿಗೆ ಹೇಳಿ ಕೊಟ್ಟಿರುವ ಜಾಗದಲ್ಲಿ ಈ ಕತೆಯನ್ನು ಅನುಕ್ರಮವಾಗಿ ಬರೆಯಿರಿ.

Edit with WPS Office

ಕ್ಷೇತ್ರ :ಓದುವುದು. ದಿನ -16

ಅಪೇಕ್ಷಿತ ಕಲಿಕಾ ಫಲಗಳು :ಕವಿವಾಣಿಯನ್ನು ಓದಿರಿ

ಬಂತಪ್ಪ ಬಂತು ಮಳೆಗಾಲ
ಬೀಜವ ಬಿತ್ತುವ ಈ ಕಾಲ
ಭೂಮಿಹಸಿರಾಗುವ ಈ ಕಾಲ
ಬಳನು ಬೆಳೆಯುವ ಈ ಕಾಲ //

ಬಂತಪ್ಪ ಬಂತು ಚಳಿಗಾಲ
ಎಲೆಗಳು ಉದುರುವ ಈ ಕಾಲ
ಕಂಬಳಿ ಹೊದೆಯುವ ಈ ಕಾಲ//

ಬಂತಪ್ಪ ಬಂತು ಬೇಸಿಗೆ ಕಾಲ
ನೀರನು ಕುಡಿಯುವ ಈ ಕಾಲ
ಮಾವು ಚಿಗುರುವ ಈ ಕಾಲ
ಕೋಗೀಲೆ ಕೂಗುವ ಈ ಕಾಲ.//

ಸೂಚನೆ; ಶಾಲಾ ಗ್ರಂಥಾಲಯದಿಂದ ಬೇರೆ ಬೇರೆ ಪುಸ್ತಕ ಪಡೆದು ಹಿರಿಯರ ಸಹಾಯದಿಂದ ಓದು ಮನೆಯಲ್ಲಿರುವ ಲಗ್ನಪತ್ರಿಕೆ ಹಾಗೂ ಸ್ನೇಹಿತರ ಬರಹಗಳನ್ನು ಓದು

ಚಟುವಟಿಕೆ 2 ಕೆಳಗಿನ ಪ್ರಶ್ನೆಗಳಿಗೆ ಮೇಲಿನ ಪದ್ಯ ಓದಿ ಅರ್ಥೈಸಿಕೊಂಡು ಉತ್ತರಿಸು

1 ಭೂಮಿ ಯಾವಾಗ ಹಸಿರಾಗುತ್ತದೆ ?

______________________________________________

2 ಮರ ಗಿಡಗಳ ಎಲೆಗಳು ಯಾವಾಗ ಉದುರುತ್ತವೆ

______________________________________________

3 ಕೋಗಿಲೆ ಹೇಗೆ ಕೂಗುತ್ತದೆ ಯೋಚಿಸು ಕೂಗು?

______________________________________________

4 ನೀನು ಓದಿರುವ ಪುಸ್ತಕಗಳ ಹೆಸರು ಪಟ್ಟಿಮಾಡು


Edit with WPS Office

ತರಗತಿ: 5. ವಿಷಯ; ಕನ್ನಡ. ದಿನ -18,19

ಕ್ಷೇತ್ರ; ಓದುವುದು

**ಅಪೇಕ್ಷಿತ ಕಲಿಕಾ ಫಲಗಳು:** ಕೈಬರಹದ ಪತ್ರ ಮತ್ತು ಇತರರ ಬರವಣಿಗೆಯನ್ನು ಓದುವುದು

**ಚಟುವಟಿಕೆ:1** ಕೆಳಗಿನ ಕೈ ಬರವಣಿಗೆ ಓದು



ಕೆಳದಿ ಚೆನ್ನಮ್ಮ ಕೆಳದಿ ಸಂಸ್ಥಾನವನ್ನು ಆಳುತ್ತಿದ್ದಳು. ಈಕೆ ತುಂಬಾ ಧೈರ್ಯಶಾಲಿ ಯುದ್ಧನಿಪುಣಳು. ಗುಣವಂತಳೂ ಆಗಿದ್ದಳು ಧರ್ಮಬುದ್ಧಿಯುಳ್ಳವಳಾಗಿ ಪ್ರಜೆಗಳನ್ನು ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದಳು

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು**

1 ಕೆಳದಿ ಸಂಸ್ಥಾನವನ್ನು ಯಾರು ಆಳುತ್ತಿದ್ದರು?

2 ಪ್ರಜೆಗಳನ್ನು ಹೇಗೆ ನೋಡಿಕೊಳ್ಳುತ್ತಿದ್ದಳುರ?

**ಚಟುವಟಿಕೆ 2** ಕೆಳಗಿನ ಬರಹ ಓದಿ ನೀತಿಯನ್ನು ಅರ್ಥ


ಆಪತ್ತಿನ ಸಂದರ್ಭದಲ್ಲಿ ಒದಗಿಬಂದವನೇ ಆಪ್ತಬಂಧು ಎನ್ನುವುದುಂಟು. ವ್ಯಕ್ತಿಗಾಗಲೀ ಸಮಾಜಕ್ಕಾಗಲೀ ದೇಶಕ್ಕಾಗಲೀ ಸಂಕಟವೊದಗಿದಾಗ ಯಾರು ಮುನ್ನುಗ್ಗಿ ಸಹಾಯ ಮಾಡುತ್ತಾನೋ ಅವನೇ ನಿಜವಾದ ಜನೋಪಕಾರಿ ಸಮಾಜ ಸೇವಕ ದೇಶೋದ್ಧಾರಕ ಆಪದ್ಬಾಂಧವ ಎಂಬ ಮಾತು ಅಂಥವನಿಗೇ ಒಪ್ಪುತ್ತದೆ.

**ಚಟುವಟಿಕೆ 3** ಖಾಲಿಜಾಗ ತುಂಬಿರಿ

1. ಆಪತ್ತಿಗಾಗುವವನೆ__________

2 ಜನರಿಗೆ ಉಪಕಾರ ಮಾಡುವವನೆ__________

ಭಾಗಿರಥಿ ಎಂ glps ಗುತ್ಯಪ್ಪ ಕಾಲೋನಿ ಶಿವಮೊಗ್ಗ ತಾಲೂಕು


Edit with WPS Office

ತರಗತಿ.5
ವಿಷಯ.ಕನ್ನಡ

ಕ್ಷೇತ್ರ : ಓದುವು ದು

ಅಪೇಕ್ಷಿತ ಕಲಿವಿನ ಫಲಗಳು  ವಿನೋದ ಚಿತ್ರ ಸರಣಿ  ಮತ್ತು ಬಿತ್ತಿ ಪತ್ರ ಓದುವುದು

ಚಟುವಟಿಕೆ ಮೇಲಿನ ಭಿತ್ತಿಪತ್ರ ತಪ್ಪಿಲ್ಲದಂತೆ ಚಿತ್ರ ನೋಡಿ ಓದಿರಿ




**2 ಮೇಲಿನ ಕತೆಯನ್ನು ಓದುತ್ತಾ ಇಲ್ಲಿ ಬರೆ.**

Edit with WPS Office

**ಚಟುವಟಿಕೆ.3**

ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗಿಯ
ಜಲ್ಲಜಲ್ಲಾನೆ ಉದುರಮ್ಮ। ನಾ ನಿನಗೆ
ಬೆಲ್ಲಾದಾರತಿಯಾ ಬೆಳಗೇನು ॥

ಅಂದುಳ್ಳ ಅಡಿಗಲ್ಲು ಚಂದುಳ್ಳ ಮೇಗಲ್ಲು
ಚಂದ್ರಮತಿಯೆಂಬ ಹಿಡಿಗೂಟ । ಹಿಡುಕೊಂಡು
ತಂದೆ ತಾಯಿಗಳ ನೆನೆದೇನ ॥

ರಾಗಿಯು ಮುಗಿದಾವು ರಾಜಾನ್ನ ಹೆಚ್ಚ್ಯಾವು
ನಾನ್ಹಿಡಿದ ಕೆಲಸ ವದಗ್ಯಾವು। ರಾಗೀಕಲ್ಲೆ
ನಾ ತೂಗಿ ಬಿಡುತೀನಿ ಬಲದೋಳು ॥



ಕಲ್ಲು ಬಿಟ್ಟೇನೆಂದು ಸಿಟ್ಯಾಕೆ ಸರಸತಿಯೇ
ಕುಕ್ಕೇಲಿ ರಾಗಿ ಬೆಳೆಯಾಲಿ । ತಕ್ಕೊಂಡು
ಮತ್ತೆ ರಾತ್ರೀಗೆ ಬರುತೀನಿ ॥

**ಕೆಳಗಿನ ಜನಪದ ಗೀತೆಯನ್ನು ಸ್ಪಷ್ಟವಾಗಿ ಓದಿರಿ**

**3.ಮೇಲಿನ ಪದ್ಯದ ಪ್ರಾಸ ಪದಗಳನ್ನು ಹೇಳುತ್ತಾ ಬರೆಯಿರಿ**


Edit with WPS Office

**19. ಕ್ಷೇತ್ರ .ಓದುವುದು :ತರಗತಿ 5. ವಿಷಯ-ಕನ್ನಡ**

**ಕಲಿವಿನ ಫಲ.: ಭಿತ್ತಿಪತ್ರವನ್ನು ಸರಾಗವಾಗಿ ಓದುವುದು**

**ಚಟುವಟಿಕೆ: 1.** ಕೆಯಳಗಿನ ಭಿತ್ತಿ ಪತ್ರವನ್ನು ಗಮನಿಸು ಇಲ್ಲಿ ಬಂದಿರುವ ಸ್ವರ ಮಾಲೆಯನ್ನು ಓದು

**ಚಟುವಟಿಕೆ:2**




Edit with WPS Office

ಭಿತ್ತಿ ಪಾತ್ರದಲ್ಲಿನ ಲಿಂಗಪ್ರತ್ಯಯಗಳಿಗೆ10 ಹೊಸ

ಪ್ರತ್ಯಯ ಸೇರಿಸಿ ಓದಿರಿ

ಚಟುವಟಿಕೆ ;3

ಈ ಕೆಳಗಿನ ಪದಗಳನ್ನು ಓದಿರಿ   ಮಾದರಿ; ಸಲಿಗೆ



# ಕನ್ನಡ–ಅಭ್ಯಾಸ ಹಾಳೆ

ವಿದ್ಯಾರ್ಥಿಯ ಹೆಸರು: _______ ತರಗತಿ: 5 ದಿ: _________ ದಿನ: 21

**ಕ್ಷೇತ್ರ;** ಓದುವುದು

**ಕಲಿಕಾಂಶ;–** ಮಕ್ಕಳ ಕಥೆ, ಪ್ರಾಸಗೀತೆ, ಮನರಂಜನೆಯ ಚಿತ್ರಕಥೆಗಳನ್ನು ನಿರರ್ಗಗಳವಾಗಿ ಓದಿ ತಿಳಿಯುತ್ತಾರೆ.

**ಚಟುವಟಿಕೆ –1 ಶಿಶುಗೀತೆ ವಾಚನ**

**ಕೊಟ್ಟಿರುವ ಕ್ಯೂಆರ್ ಕೋಡ್ ಬಳಸಿ ಶಿಶುಗೀತೆ ಅಭ್ಯಾಸ ಮಾಡಿ.**

ಕುರಿಮರಿ ಮ್ಯಾಂ
ಮುದ್ದಮರಿ ಮ್ಯಾಂ
ಕಾಡಿನಲ್ಲಿ ದಾರಿ ತಪ್ಪಿ
ಕೂಗಿತವ್ವ ಮ್ಯಾಂ



ಪಟ್ಟೆ ಹುಲಿ ಭಂ
ಕುರಿಯ ಕಂಡು ಹಂ
ಕುರಿಯ ತಿನ್ನಲೆಂದು
ಹಾರಿತಮ್ಮ ಭಂ

ಬೇಡ ಬಂಧ ಭಂ
ಬಿಲ್ಲು ಬಾಣ ಭಂ
ಬಾಣ ತಗುಲಿ ಹುಲಿಯು ನೆಲಕೆ
ಬಿದ್ದಿತಮ್ಮ ಢಂ

**ಚಟುವಟಿಕೆ –2 ಕೊಟ್ಟಿರುವ ಕಥೆಯನ್ನು ನಿರರ್ಗಗಳವಾಗಿ ಓದಿ**

## ರೈತ ಮತ್ತು ಹದ್ದು

ಒಂದು ಊರಿನಲ್ಲಿ ಒಬ್ಬ ರೈತನಿದ್ದ. ಆ ರೈತ ದಿನಾಲೂ ತನ್ನ ಹೊದಲ್ಲಿ ಕೆಲಸ ಮಾಡುತ್ತಿದ್ದ. ಒಮ್ಮೆ ಒಂದು ಹದ್ದು ಬಲೆಯಳಗೆ ಸಿಕ್ಕಿಕೊಂಡಿತು. ಅದನ್ನು ರೈತ ನೋಡಿದ. ಹದ್ದಿನ ಸ್ಥಿತಿ ನೋಡಿ ರೈತನಿಗೆ ಕರುಣೆ ಬಂದಿತು. ಹದ್ದನ್ನು ಬಲೆಯಿಂದ ಬಿಡಿಸಿದ. ಅದು ಸಂತಸದಿಂದ ಹಾರಿ ಹೋಯಿತು.

ಊರ ಹೊರಗೆ ರೈತನ ಮನೆ ಇದ್ದಿತು. ಒಮ್ಮೆ ಆತ ಮನೆಯಲ್ಲಿ ಕುಳಿತಿದ್ದ. ಅವನ ಮನೆಯ ಗೋಡೆ ಕುಸಿಯುವ ಸ್ಥಿತಿಯಲ್ಲಿತ್ತು. ಆಕಾಶದಲ್ಲಿ ಹಾರಾಡುತ್ತಿದ್ದ ಹದ್ದು ಅದನ್ನು ಗಮನಿಸಿತು. ಹದ್ದು ನಾಣ್ಯವನ್ನು ಹುಡುಕಿ ತಂದಿತು. ರೈತನಿಗೆ ಕಾಣುವಂತೆ ಸ್ವಲ್ಪ ದೂರದಲ್ಲಿ ಬೀಳಿಸಿತು. ಅದೇನೆಂದು ನೋಡಲು ರೈತ ಎದ್ದು ಹೊರಗೆ ಬಂದನು. ಆಗ ಗೋಡೆ ಕುಸಿಯಿತು. ಅವನಿಗೆ ಹದ್ದು ಬೇಕೆಂದೇ ನಾಣ್ಯ ತಂದು ಹಾಕಿದ್ದು ಎಂದು ತಿಳಿಯಿತು. ತನ್ನ ಜೀವ ಉಳಿಸಿದ ಹದ್ದಿನ ಕಡೆಗೆ ಪ್ರೀತಿಯಿಂದ ನೋಡಿದನು. ಅದಕ್ಕೆ ಕೈ ಮುಗಿದನು. ಹದ್ದು ಹರ್ಷದಿಂದ ಮುಗಿಲ ಕಡೆಗೆ ಹಾರಿ ಹೋಯಿತು.

# ಕನ್ನಡ–ಅಭ್ಯಾಸ ಹಾಳೆ

ವಿಧ್ಯಾರ್ಥಿಯ ಹೆಸರು: _______ ತರಗತಿ: 5 ದಿ: _________ ದಿನ: 21

**ಅಪೇಕ್ಷಿತ ಕಲಿಕಾಫಲ;–ಸುಮಾರು 4000 ಪದಗಳನ್ನು ಓದಿ ಗ್ರಹಿಸುವುದು.**

**ಕಲಿಕಾಂಶ;– ಪಠ್ಯದಲ್ಲಿ ಬರುವ ಹೊಸ ಪದಗಳ ಅರ್ಥಗಳನ್ನು ಪದಕೋಠಿಯಿಂದ ಓದಿ ತಿಳಿಯುತ್ತಾರೆ..**

## ಪಠ್ಯಭಾಗ;– ಕನಸುಗಾರ ಕಲಾಂ

ಪ್ರಸಿಧ್ಧ ಮೂಳೆ ತಜ್ಞರೊಬ್ಬರು ವಿಜ್ಞಾನಿಯೊಬ್ಬರ ಪ್ರಯೋಗಾಲಯಕ್ಕೆ ಭೇಟಿಕೊಟ್ಟರು. ವಿಜ್ಞಾನಿ ತನ್ನ ಪ್ರಯೋಗಾಲಯದಲ್ಲಿದ್ದ ವಸ್ತುಗಳನ್ನು ಒಂದೊಂದಾಗಿ ತೋರಿಸುತ್ತಾ ವಿವರಿಸಿದರು. ಕ್ಷಿಪಣಿಯಲ್ಲಿ ಬಳಸುವುದಕ್ಕಾಗಿ ತಾನು ತಯಾರಿಸಿದ ಹಗುರವಾದ ವಸ್ತುವೊಂದನ್ನು ಹೆಮ್ಮೆಯಿಂದ ತೋರಿಸಿದರು. ಅದನ್ನು ಮೂಳೆ ತಜ್ಞರು ಕೈಯಿಂದ ಎತ್ತಿ ಬಲು ಹಗು! ಎಂದು ಉದ್ಘರಿಸಿದರು. ಒಡನೆಯೇ ವಿಜ್ಞಾನಿಯನ್ನು ಹೈದರಾಬಾದಿನಲ್ಲಿರುವ ತಮ್ಮ "ನಿಜಾಮ್" ಆಸ್ಪತ್ರೆಗೆ ಬರುವಂತೆ ಕೇಳಿಕೊಂಡರು. ಅಂದೆ ಜೊತೆಯಲ್ಲಿ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳನ್ನು ತೋರಿಸಿದರು. ಅಲ್ಲಿದ್ದವರಲ್ಲಿ ಹೆಚ್ಚಿನವರು ಮಕ್ಕಳು ಅವರಲ್ಲಿ ಕೆಲವರು ಬೇರೆ ಬೇರೆ ಕಾರಣಗಳಿಂದ ಕಾಲಿನ ನ್ಯೂನತೆಗೆ ಒಳಗಾಗಿದ್ದರು. ಅವರ ಕಾಲಿಗೆ ಸುಮಾರು 3 ಕೆ.ಜಿ ತೂಕದ ಲೋಹದ ಕ್ಯಾಲಿಪರ್ ಅಳವಡಿಸಿದ್ದರು.

- **ಈ ಮೇಲಿನ ಪಠ್ಯಭಾಗವನ್ನು ಓದಿಕೊಂಡು ಬಣ್ಣ ಹಾಕಿದ ಪದಗಳ ಅರ್ಥವನ್ನು ಪದಕೋಠಿ ಅಥವಾ ಶಬ್ದಕೋಶ ಹುಡುಕಿ ಬರೆಯಿರಿ.**

- **ಯಾವ ಕವರ್ ಯಾವ ಕಾಗದಕ್ಕೆ ಎಂಬುದನ್ನು ಜೋಡಿಸಿರಿ.**

ರವಿ

ಜಗ

ಸಮುದ್ರ

ಪೀಠ

ಆಸನ

ಕಡಲು

ಸೂರ್ಯ

ಆರಿಸು

ಹೆಕ್ಕು

ಸೂರ್ಯ

ಲೋಕ

ಅರುಣಾ ಜಿ.ಎಸ್ ಸ.ಹಿ.ಪ್ರಾ ಶಾಲೆ ಅಗಸನಹಳ್ಳಿ ಮಾರ್ಗದರ್ಶಕರ ಸಹಿ ದಿನಾಂಕದೊಂದಿಗೆ.

Edit with WPS Office

ಕ್ಷೇತ್ರ :ಓದುವುದು. ದಿನ - 22

ಸಾಮರ್ಥ್ಯ : ಹೊಸ ಪದಗಳಿಗೆ ಸಮಾನಾರ್ಥಕ ಪದಗಳನ್ನು ಪದಕೋಶದಿಂದ ಹುಡುಕಿ ಓದಿ ಅರ್ಥೈಸಿಕೊಳ್ಳುವರು.

1. ಸಮಾನಾರ್ಥಕ ಪದಗಳನ್ನು ಪದಕೋಶ ಸಹಾಯದಿಂದ ಹುಡುಕಿ ಬರೆಯಿರಿ.

ಸಾಗರ ________ರಾಜ________ ಸೂರ್ಯ_________ ಭೂಮಿ ________

ಪುತ್ರ ____________ಹೂವು_________ ಕಮಲ________ಗೆಳೆಯ________

2.ಗುಂಪಿನಲ್ಲಿ ಇರುವ ನಮ್ಮನ್ನು ಒಂದೆಡೆ ಸೇರಿಸಿ.

ಖುಷಿ, ಇಚ್ಛೆ ,ಹಿಗ್ಗು ,ಸಾಮರ್ಥ್ಯ, ಬಲ, ಸಂತೋಷ, ಯೋಗ್ಯತೆ, ಅಪೇಕ್ಷೆ ,ಆಸೆ, ಪೋಷಿಷು, ಆಗಸ, ಗಗನ, ಆಕಾಶ, ಕಾಪಾಡು, ರಕ್ಷಿಸು ,ಭಾನು.

| | | | | |
|---|---|---|---|---|
| | | | | |
| | | | | |
| | | | | |
| | | | | |
| | | | | |

3.ನನ್ನ ಬಳಗದೊಂದಿಗೆ ಗೆರೆ ಎಳೆದು ಹೊಂದಿಸಿ ಸೇರಿಸು.

ಮಾದರಿ ;

ಉಬ್ಬಸ. ಆಶ್ಚರ್ಯ. ಬೆರಗು
ಆನಂದ. ಅಚ್ಚರಿ
ವಿಸ್ಮಯ. ಸಂತೋಷ

ಕಡಲು ಸಾಗರ
ಸಾಗರ ಸಮುದ್ರ. ಶರಧಿ
ಒಡಲು ಜಲಧಿ

ಅಡವಿ ಕಾನನ
ಸರೋವರ ಅರಣ್ಯ ಮುಗಿಲು
ವನ ಅಟವಿ

ಇನ ರವಿ
ಪೃಥ್ವಿ. ಭೂಮಿ. ಇಳೆ
ಧರೆ ಅವನಿ.

Edit with WPS Office

ಕ್ಷೇತ್ರ : ಓದುವುದು. ದಿನ : 23

ಸಾಮರ್ಥ್ಯ : ಘಟನೆಗಳಿಗೆ ಕಾರಣ ಪರಿಣಾಮಗಳನ್ನು ತಿಳಿಯುತ್ತಾರೆ.

*ಕಥೆಯನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ

ಒಬ್ಬ ರಾಜನಿದ್ದನು ಅವನಿಗೊಬ್ಬ ಮಗಳಿದ್ದಳು ಅವಳು ತುಂಬಾ ಅಹಂಕಾರಿ ರಾಜಕುಮಾರಿ ಪ್ರಜೆಗಳಿಗೆಲ್ಲ ತುಂಬಾ ಕಷ್ಟ ಕೊಡುತ್ತಿದ್ದಳು ಕೆಟ್ಟ ಮಾತುಗಳಿಂದ ನೋಯಿಸುತ್ತಿದಳು. ಊರಿನಲ್ಲಿ ಬುದ್ಧಿವಂತ ಯುವಕನೊಬ್ಬನಿದ್ದ ಅವನು ಹೇಗಾದರೂ ಮಾಡಿ ರಾಜಕುಮಾರಿಗೆ ಬುದ್ಧಿ ಕಲಿಸಬೇಕೆಂದು ತೀರ್ಮಾನಿಸಿದ ರಾಜಕುಮಾರಿಯ ಬಳಿಬಂದು ಒಂದು ಕೆಲಸ ಕೊಡುವಂತೆ ಕೇಳಿದ ಆಗ ರಾಜಕುಮಾರಿ ಒಂದು ಉಂಡೆ ದಾರವನ್ನು ಕೊಟ್ಟಳು ಇದರಿಂದ ಒಂದು ಸೀರೆಯನ್ನು ನೇಯ್ದುಕೊಂಡು ಬರಲು ತಿಳಿಸಿದಳು ಆಗ ಯುವಕ ಒಂದು ಚಿಕ್ಕ ಕೋಲನ್ನು ಕೊಟ್ಟನು ಇದರಿಂದ ಕೈಮಗ್ಗ ಮಾಡಿಸಿ ಕೊಡಿ ಆಗ ಸೀರೆ ನೇಯಬಲ್ಲೆನೆಂದು ಹೇಳಿದನು ಇದನ್ನು ಕೇಳಿ ರಾಜಕುಮಾರಿಗೆ ಯುವಕನ ಜಾಣತನ ಮತ್ತು ತನ್ನ ತಪ್ಪಿನ ಅರಿವಾಯಿತು

1. ರಾಜನಿಗೆ ಎಂತಹ ಮಗಳಿದ್ದಳು ?

______________________________________

2.ರಾಜಕುಮಾರಿ ಯಾರಿಗೆ ಕಷ್ಟ ಕೊಡುತ್ತಿದ್ದಳು ?

______________________________________

3.ರಾಜಕುಮಾರಿಗೆ ಬುದ್ಧಿ ಕಲಿಸಲು ಯಾರು ತೀರ್ಮಾನಿಸಿದರು?

______________________________________

4 .ಯುವಕ ರಾಜಕುಮಾರಿಯ ಬಳಿಬಂದು ಏನು ಹೇಳಿದ?

______________________________________

5.ಯುವಕ ರಾಜಕುಮಾರಿಗೆ ಏನು ಮಾಡಿಸಿ ಕೊಡಬೇಕೆಂದು ಕೇಳಿದ?

______________________________________

6. ರಾಜಕುಮಾರಿಗೆ ಏಕೆ ನಾಚಿಕೆಯಾಯಿತು?

______________________________________

*ಹೀಗಿದ್ದರೆ ಹೀಗಿಲ್ಲದಿದ್ದರೆ ಏನಾಗಬಹುದು ?

Edit with WPS Office

1. ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಚಲಾಯಿಸುವುದು

______________________________________________

2. ಬೇಗ ಮಲಗುವುದು ಬೇಗ ಏಳುವುದು?

______________________________________________

3. ಪೇಟೆಯಿಂದ ತರುವ ಹಣ್ಣು ತರಕಾರಿಗಳನ್ನು ತೊಳೆಯದೆ ಬಳಸುವುದು?

______________________________________________

4. ಅಂದಿನ ಕೆಲಸ ಒಂದೇ ಮಾಡುವುದು

______________________________________________

5.ದಿನವೂ ಸ್ನಾನ ಮಾಡದಿರುವುದು

______________________________________________

ಕ್ಷೇತ್ರ : ಬರವಣಿಗೆ. ದಿನ - 24

ಸಾಮರ್ಥ್ಯ ; ಅಕ್ಷರಗಳ ಸರಿಯಾದ ಆಕಾರ ದೊಂದಿಗೆ ಪದಗಳನ್ನು ತಪ್ಪಿಲ್ಲದಂತೆ ಬರೆಯುವುದು.

ಚಟುವಟಿಕೆ 1 : ಬಣ್ಣ ತುಂಬು

# ದ ಸ ರ

ಇದೆ ರೀತಿ ನಿನ್ನ ಹೆಸರು ಮತ್ತು ಶಾಲೆ ಹೆಸರು ಬರೆಯಲು ಪ್ರಯತ್ನಿಸು.

ಚಟುವಟಿಕೆ : 2

ನಲಿಕಲಿಯ ಪ್ಲಾಸ್ಟಿಕ್ ಅಕ್ಷರಗಳ ಸಹಾಯದಿಂದ ರಟ್ಟಿನ ಮೇಲೆ ಬರೆದು ಅವುಗಳನ್ನು ಅವುಗಳ ಮೂಲಕ ಹೆಚ್ಚು ಹೆಚ್ಚು ಪದಗಳನ್ನು ರಚಿಸು.

Edit with WPS Office

ಚಟುವಟಿಕೆ : 3  ನಕಲು ಮಾಡು

1. ತಾಯಿಯೇ ದೇವರು

______________________________________________

2. ಜ್ಞಾನವೇ ಶಕ್ತಿ

___________________________________

3. ಮನೆಯೇ ಮೊದಲ ಪಾಠಶಾಲೆ

____________________________________

4. ದೇಶ ಸೇವೆಯೇ ಈಶ ಸೇವೆ

5. ಆರೋಗ್ಯವೇ ಮಹಾಭಾಗ್ಯ

____________________________________________

ಚಟುವಟಿಕೆ : 4

ಕನ್ನಡ ಕಾಪಿ ಪುಸ್ತಕದಲ್ಲಿ ಅಥವಾ ಈ ಪುಟದಲ್ಲಿ ತಪ್ಪಿಲ್ಲದಂತೆ 50 ಕನ್ನಡ ಪದಗಳನ್ನು ಬರೆ.

**ರೂಪಶ್ರೀ**

**ಸ ಹಿ.ಪ್ರಾ. ಶಾಲೆ. ಬನಶಂಕರಿ**